# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

Scan For Digital Colourful Hampi Times E-paper
www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com

ಸಂಪುಟ:01 Volume:01 • ಸಂಚಿಕೆ:266 Issue:266 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 19.03.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2









## ಮೈಕ್ರೋ ನ್ಯೂಸ್

### ಕಂದಾಯ ಪರಿವೀಕ್ಷಕ ಬಿ.ಮುರಳಿಕೃಷ್ಣ ಅಮಾನತ್ತು : ಡಿಸಿ ಆದೇಶ

**ಹಂಪಿ ಟೈಮ್ಸ್ ಹೊಸಪೇಟೆ:**
ಕೂಡ್ಲಿಗಿ ತಾಲೂಕು ಹೊಸಹಳ್ಳಿ ಹೋಬಳಿ ಕಂದಾಯ ಪರಿವೀಕ್ಷಕ ಬಿ.ಮುರುಳಿಕೃಷ್ಣ ಇವರು ಮೇಲಾಧಿಕಾರಿಗಳ ಅನುಮತಿ ಪಡೆಯದೇ ಪದೇ ಪದೇ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿ ಮತ್ತು ಸರ್ಕಾರಿ ಕೆಲಸವನ್ನು ನಿರ್ವಹಿಸುವಲ್ಲಿ ನಿರ್ಲಕ್ಷ್ಯತನ ಹಾಗೂ ಬೇಜವಾಬ್ದಾರಿತನ ತೋರಿರುವುದರಿಂದ ಕರ್ನಾಟಕ ನಾಗರಿಕ ಸೇವಾ ನಿಯಮದಡಿ ಸೇವೆಯಿಂದ ಅವರನ್ನು ಅಮಾನತ್ತುಗೊಳಿಸಲಾಗಿದೆ ಎಂದು ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಆದೇಶಿಸಿದ್ದಾರೆ.
ಮೇಲಾಧಿಕಾರಿಗಳ ನೋಟೀಸಿಗೆ ಸಮರ್ಪಕವಾಗಿ ಸ್ಪಂದಿಸದೇ ಸರ್ಕಾರಿ ಕೆಲಸಕ್ಕೆ 62 ದಿನ ಕರ್ತವ್ಯಕ್ಕೆ ಗೈರು, ತಾವು ನಿರ್ವಹಿಸುತ್ತಿದ್ದ ಅಭಿಲೇಖಾಲಯದ ಕೊಠಡಿಯ ಬೀಗದ ಕೈಯನ್ನು ಯಾರಿಗೂ ನೀಡದೇ, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಕೆಲಸಕ್ಕೆ ತೊಂದರೆಯುಂಟು ಮಾಡಿದ್ದಾರೆ ಎಂಬ ವರದಿಯಾಧರಿಸಿ ಅಮಾನತ್ತುಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

### ಶ್ರೀಗೋಣಿಬಸವೇಶ್ವರ ಸ್ವಾಮಿ ಜಾತ್ರೋತ್ಸವ: ಮದ್ಯೆ ಮಾರಾಟ ನಿಷೇದ

**ಹಂಪಿ ಟೈಮ್ಸ್ ಹೊಸಪೇಟೆ**
ಮಾರ್ಚ 19ರಿಂದ ಮಾರ್ಚ 21ರವರೆಗೆ ನಡೆಯಲಿರುವ ಶ್ರೀಗೋಣಿಬಸವೇಶ್ವರ ಸ್ವಾಮಿಯ ರಥೋತ್ಸವ ಹಾಗೂ ಜಾತ್ರಾ ಪ್ರಯುಕ್ತ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಕಾನೂನು ಸುವ್ಯವಸ್ಥೆ ಹಾಗೂ ಶಾಂತಿ ಪಾಲನೆಗಾಗಿ ಮತ್ತು ಸಾರ್ವಜನಿಕರ ಹಿತಾಸಕ್ತಿ ಕಾಪಾಡುವ ಹಿತದೃಷ್ಟಿಯಿಂದ ಮಾರ್ಚ 20ರ ಬೆಳಗ್ಗೆ 6 ಗಂಟೆಯಿಂದ ಮಾರ್ಚ 21ರ ಬೆಳಗ್ಗೆ 6 ಗಂಟೆವರೆಗೆ ಕೂಲಹಳ್ಳಿ ಗ್ರಾಮದಲ್ಲಿರುವ ಶ್ರೀ ಸಾಯಿ ಚೈತನ್ಯ ಶಾಪ್ ಮದ್ಯದಂಗಡಿಯಲ್ಲಿ ಮದ್ಯೆ ಮಾರಾಟ ಮತ್ತು ಸಾಗಾಣಿಕೆ ಮಾಡದಂತೆ ಹಾಗೂ ಈ ಮದ್ಯದಂಗಡಿ ಮುಚ್ಚುವಂತೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


**ಬೇಕಾಗಿದ್ದಾರೆ**
ಶಾನಭಾಗ ಟವರ್ಸ್‌ನಲ್ಲಿ ಹಾಜರಿ ಹೆಬ್ಬಟ್ಟು ಮಿಷನ್ ಹಾಕುವವರು ಬೇಕಾಗಿದ್ದಾರೆ.
ಮೂರರಿಂದ ನಾಲ್ಕು
Biometric Fingerprint
Time & Attendance Machine
ಮಷಿನ್ ಹಾಕಬೇಕಿದೆ. ಸರ್ವಿಸ್ ನೀಡಲಿಚ್ಛಿಸುವವರು ಸಂಪರ್ಕಿಸಿ.
**ಶಾನಭಾಗ ಟವರ್ಸ್ ನ್ಯಾಷನಲ್ (ಪ್ರೈ) ಲಿಮಿಟೆಡ್**
ಶಾನಭಾಗ ಸರ್ಕಲ್, ಹೊಸಪೇಟೆ-583201
9482147421
9449193615


# ರಾಗಿ, ಜೋಳ ಖರೀದಿ ಆರಂಭ

## ಸ್ವಚ್ಚ ಧಾನ್ಯ ಖರೀದಿ | ಪ್ರತಿ ಕ್ವಿಂಟಾಲ್ ರಾಗಿಗೆ 3,846 ರೂ., ಜೋಳಕ್ಕೆ 3180 ರೂ.

## ಜಿಲ್ಲಾಧಿಕಾರಿ ದಿವಾಕರ ಹೊಸಪೇಟೆ ಎಪಿಎಂಸಿ ಪ್ರಾಂಗಣಕ್ಕೆ ಭೇಟಿ ಪರಿಶೀಲನೆ



**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಎಪಿಎಂಸಿ ಪ್ರಾಂಗಣದಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಮುಂಗಾರು ಹಂಗಾಮಿನ ರಾಗಿ ಮತ್ತು ಜೋಳದ ಖರೀದಿ ಪ್ರಕ್ರಿಯೆ ಸೋಮವಾರ ಪ್ರಾರಂಭವಾಯಿತು.
ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಎಪಿಎಂಸಿ ಪ್ರಾಂಗಣಕ್ಕೆ ಸೋಮವಾರ ಭೇಟಿ ನೀಡಿ, ಸರ್ಕಾರದ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಮೂಲಕ ರೈತರಿಂದ ರಾಗಿ ಮತ್ತು ಜೋಳ ಖರೀದಿಸುವ ಪ್ರಕ್ರಿಯೆ ಬಗ್ಗೆ ಮಾಹಿತಿ ಪಡೆದರು.
ಪ್ರಸ್ತುತ ಈ ಖರೀದಿ ಕೇಂದ್ರದಲ್ಲಿ 59 ರೈತರು 1132.50 ಕ್ವಿಂಟಾಲ್ ರಾಗಿಯನ್ನು, 23 ರೈತರು 910 ಕ್ವಿಂಟಾಲ್ ಬಿಳಿಜೋಳವನ್ನು ನೋಂದಾಯಿಸಿದ್ದಾರೆ. ಸರ್ಕಾರವು ಈ ಬಾರಿ ಎಫ್.ಎ.ಕ್ಯೂ. ಗುಣಮಟ್ಟದ ಪ್ರತಿ ಕ್ವಿಂಟಾಲ್ ರಾಗಿಗೆ 3,846 ರೂ. ಮತ್ತು ಎಫ್.ಎ.ಕ್ಯೂ. ಗುಣಮಟ್ಟದ ಜೋಳಕ್ಕೆ 3180 ರೂ.ಗಳನ್ನು ಘೋಷಿಸಿರುತ್ತದೆ ಎಂದು ಅಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದರು.

**ರಾಗಿ 1132.50 ಕ್ವಿಂಟಾಲ್, ಬಿಳಿಜೋಳ 910 ಕ್ವಿಂಟಾಲ್ ರೈತರಿಂದ ನೋಂದಣಿ**

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 2022-23ನೇ ಸಾಲಿನಲ್ಲಿ ಹೊಸಪೇಟೆ ಖರೀದಿ ಕೇಂದ್ರವು ಆರಂಭವಾಗಿದೆ. 2022-23ನೇ ಸಾಲಿನ ಮುಂಗಾರು ಋತುವಿನಲ್ಲಿ ಬೆಳೆದ ಭತ್ತ, ರಾಗಿ ಮತ್ತು ಜೋಳ ಉತ್ಪನ್ನಗಳನ್ನು ಖರೀದಿಸಲು ವಿಜಯನಗರ ಜಿಲ್ಲೆಗೆ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ಖರೀದಿ ಏಜೆನ್ಸಿಯಾಗಿರುತ್ತದೆ. ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ವಿಜಯನಗರ ಜಿಲ್ಲೆಯ ಹೊಸಪೇಟೆ ಎಪಿಎಂಸಿ ಪ್ರಾಂಗಣದಲ್ಲಿ ಡಿಸೆಂಬರ್ 1 ರಿಂದ ನೋಂದಣಿ ಕೇಂದ್ರವನ್ನು ತೆರೆದಿರುತ್ತದೆ ಎಂದು ಅಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದರು.
ಖರೀದಿ ಮಾಡಿದ ಉತ್ಪನ್ನವನ್ನು ಸರ್ಕಾರವು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿತರಿಸುವ ಉದ್ದೇಶವಿರುವುದರಿಂದರಾಗಿ ಮತ್ತು ಜೋಳವನ್ನು ಬೆಳೆದ ರೈತರು ತಾವು ಬೆಳೆದ ಉತ್ಪನ್ನವನ್ನು ಚೆನ್ನಾಗಿ ಒಣಗಿಸಿ, ಯಾವುದೇ ಕಸ, ಕಡ್ಡಿ, ಧೂಳು, ಮಣ್ಣಿರದಂತೆ ಸ್ವಚ್ಚಗೊಳಿಸಿ ಖರೀದಿ ಕೇಂದ್ರಗಳಿಗೆ ತರಲು ರೈತರಲ್ಲಿ ಮನವಿ ಮಾಡಿರುವುದಾಗಿ ಅಧಿಕಾರಿಗಳು ತಿಳಿಸಿದರು.
ಈ ಸಂದರ್ಭದಲ್ಲಿ ಆಹಾರ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಿಕಾರ್ಜುನ, ಕೃಷಿ ಮಾರಾಟ ಮಂಡಳಿಯ ಸಿದ್ದು ಸ್ವಾಮಿ, ಖರೀದಿ ಏಜೆನ್ಸಿದಾರರು, ಜಿಲ್ಲಾ ವ್ಯವಸ್ಥಾಪಕರು ಈ ಸಂದರ್ಭದಲ್ಲಿ ಇದ್ದರು.

# ಗ್ರಾಮದ ಉಚ್ಚಂಗೆಮ್ಮದೇವಿ ಜಾತ್ರಾಮಹೋತ್ಸವ ಶಾಂತಿ ಸಭೆ



**ಹಂಪಿ ಟೈಮ್ಸ್ ಹರಪನಹಳ್ಳಿ**
ತಾಲೂಕಿನ ಹಿರೇಮೇಗಳಗೆರೆ ಗ್ರಾಮದಲ್ಲಿ ಒಂಭತ್ತು ವರ್ಷಕ್ಕೊಮ್ಮೆ ಉಚ್ಚಂಗೆಮ್ಮ ದೇವಿಯ ಜಾತ್ರೆ ಮೂರು ದಿನಗಳ ಕಾಲ ನಡೆಯುವ ಪ್ರಯುಕ್ತ ಅರಸೀಕೆರೆ ಪೊಲೀಸ್ ಠಾಣೆ ವತಿಯಿಂದ ಶಾಂತಿ ಸಭೆ ನಡೆಸಲಾಯಿತು.
ಪಿಎಸ್‌ಐ. ಕೆ. ರಂಗಯ್ಯ ಮಾತನಾಡಿ, ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಯಾವುದೇ ಧ್ವನಿ ವರ್ಧಕಗಳನ್ನು ಬಳಸುವುದಾದರೆ ಅನುಮತಿ ಪಡೆಯಬೇಕು. ದೇವರ ಹೆಸರಿನಲ್ಲಿ ಪ್ರಾಣಿ ಬಲಿ ನಿಷೇಧಿಸಲಾಗಿದೆ, ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಗ್ರಾಮದ ಮುಖಂಡರು ಹಾಗೂ ಎಲ್ಲಾ ಜನಾಂಗದ ಸಹಕಾರದೊಂದಿಗೆ ಶಾಂತಿಯುತವಾಗಿ ಜಾತ್ರೆಯನ್ನು ಆಚರಿಸಬೇಕು ಎಂದು ಹೇಳಿದರು.
ಮುಖಂಡರಾದ ಮಹಾಬಲೇಶ್ವರ ಗೌಡ ಮಾತನಾಡಿ, ನಮ್ಮ ಗ್ರಾಮದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಶಾಂತಿಯುತವಾಗಿ ಜಾತ್ರೆಯನ್ನು ಆಚರಿಸಲಾಗುವುದೆಂದು ಹೇಳಿದರು.
ಕೆ.ಪರುಶುರಾಮಪ್ಪ ಮಾತನಾಡಿ, ಗ್ರಾಮದಲ್ಲಿನ ಗ್ರಾಮಸ್ಥರು ಸಹೋದರರಂತೆ ಇದ್ದು ಹೊಂದಾಣಿಕೆಯಿಂದ ಜಾತ್ರೆಯನ್ನು ಸಂಭ್ರಮ, ಸಡಗರದಿಂದ ಆಚರಿಸೋಣ ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಅಂಗಡಿ ರಾಜಣ್ಣ, ಟಿ. ಪರುಶುರಾಮ, ದೊಡ್ಡಜ್ಜರ ಹನುಮಂತಪ್ಪ, ದೊಡ್ಡ ವೆಂಕಟೇಶಪ್ಪ, ಅಂಗಡಿ ಪ್ರಕಾಶ್, ಹನುಮಂತಪ್ಪ, ಪಿಡಿಒ. ವಿಜಯ್ ಕುಮಾರ್,ಕೂಲಹಳ್ಳಿ ಕೊಟ್ರೇಶ್, ಬಸವರಾಜ್ ಹಾಗೂ ಊರಿನ ಗ್ರಾಮಸ್ಥರು ಹಾಜರಿದ್ದರು.

# ಜೆಸ್ಕಾಂ ಅಧಿಕಾರಿ ಗುತ್ತಿಗೆದಾರರ ಹಗ್ಗ ಜಗ್ಗಾಟಕ್ಕೆ ವಿದ್ಯುತ್ ಸಂಪರ್ಕವಿಲ್ಲದೆ ಬಾಡಿದ ಬಾಳೆ

## ಟ್ರಾನ್ಸ್‌ಫಾರ್ಮರ್ ಕೊಡಲು ಎರಡು ವರ್ಷ, 15 ದಿನವಾದರೂ ಸಂಪರ್ಕ ಕಲ್ಪಿಸಿದ ಅಧಿಕಾರಿಗಳು

**ಹಂಪಿ ಟೈಮ್ಸ್ ಕೊಟ್ಟೂರು**
ತಾಲೂಕಿನ ತಿಮಲಾಪುರ ಗ್ರಾಮದ ಶಾನುಭೋಗರ ರಾಜಣ್ಣ ಮಕ್ಕಳಂತೆ ಬೆಳೆಸಿದ್ದ ಬಾಳೆ ಬೆಳೆಗೆ ಜೆಸ್ಕಾಂ ಅಧಿಕಾರಿಗಳು ಸಕಾಲದೊಳಗೆ ವಿದ್ಯುತ್ ಸಂಪರ್ಕ ಕಲ್ಪಿಸದ್ದರಿಂದ ಕೈಗೆ ಬಂದ ತುತ್ತು ಬಾಯಿಗಿಲ್ಲದಂತಾಗಿದ್ದಲ್ಲದೆ ಬರಗಾಲದಲ್ಲಿ ಮತ್ತಷ್ಟು ಬರೆ ಎಳೆದಂತಾಗಿದೆ.
ಶಾನುಭೋಗರ ರಾಜಣ್ಣ ಸೋಮವಾರ ಪತ್ರಿಕೆಯೊಂದಿಗೆ ಮಾತನಾಡಿ, ಲೋ ಲೋಡ್ ಸೆಡ್ಡಿಂಗ್ ಸಮಸ್ಯೆಯಿಂದ ಬೇಸತ್ತಿದ್ದ ನಾನು ಸ್ವತಃ ಟಿ ವಾಸುದೇವ ರಾವ್ ತಂದೆ ವೆಂಕೋಬ್ ರಾವ್ ಮನೆಯವರ ಹೆಸರಿನಲ್ಲಿ ನೂತನ ಟ್ರಾನ್ಸ್ ಫಾರ್ಮ ರಗೆ 2022 ಸೆಪ್ಟೆಂಬರ್ 6 ರಂದು ಕೃಷಿ ಚಟುವಟಿಕೆಗೆಂದೆ 80 ಸಾವಿರ ರೂ. ವರ್ಕ್ ಆರ್ಡ್ ಮಾಡಿಸಿದೆ, ಅಲ್ಲಿಂದ ಸುಮಾರು 2 ವರ್ಷ ಟ್ರಾನ್ಸ್ ಫಾರ್ಮ್‌ರಗಾಗಿ ಜಾತಕ ಪಕ್ಷಿಯಂತೆ ಕಾದಿರುವೆ. 15 ದಿನಗಳ ಹಿಂದೆ, ಅಂತೂ ಇಂತು ಟ್ರಾನ್ಸ್ ಫಾರ್ಮ್‌ರ್ ಬಂತು, ಬಂದು 15 ದಿನ ಕಳೆದಿವೆ. ಅಧಿಕಾರಿಗಳು ಮಾತ್ರ ಕನೆಕ್ಷನ್ ಕೊಡಲಿಕ್ಕೆ ಮೀನಾ ಮೇಷ ಮಾಡುತ್ತಿದ್ದಾರೆ ಯಾಕೋ ತಿಳಿಯುತ್ತಿಲ್ಲ. ತಿಳುವಳಿಕೆ ಇರುವಂತ ನಮ್ಮನ್ನೇ ಅಧಿಕಾರಿಗಳು ಈ ರೀತಿ ಕಾಡಿಸುತ್ತಾರೇ. ನಗರ ಸಂಪರ್ಕ ಇಲ್ಲದ ರೈತರ ಸ್ಥಿತಿ ಹೇಗೆ ? ಎಂದು ಆಕ್ರೋಶ ವ್ಯಕ್ತಪಡಿಸಿದರು.
ಕಳೆದ ವರ್ಷ 7 ಎಕ್ಕರೆ ಬಾಳೆಗೆ 5 ಲಕ್ಷ ರೂ. ಆಗಿತ್ತು. ಈ ಬಾರಿಯೂ ಉತ್ತಮ ಇಳುವರಿ ಬರಬಹುದು ಎಂಬ ನಿರೀಕ್ಷೆ ಇತ್ತು, ಜೆಸ್ಕಾಂ ಅಧಿಕಾರಿಗಳು ಸಮಯಕ್ಕೆ ವಿದ್ಯತ್ ಸಂಪರ್ಕ ಕೊಡದ ಕಾರಣ ಮತ್ತು ಲೋಡ್ ಸೆಡ್ಡಿಂಗ್ ಸಮಸ್ಯೆಯಿಂದ ಬಿಸಿಲಿನ ತಾಪಕ್ಕೆ ಬಾಳೆ ತೋಟ ಭಾಗಶಃ ಒಣಗಿ ನಿಂತಿದೆ. ಆರ್ಥಿಕ ಸಂಕಷ್ಟಕ್ಕೆ ಸಿಲುಕಿಸಿದ್ದಾರೆ ಎಂದು ಅಳಲು ತೋಡಿಕೊಂಡರು
ಜೆಸ್ಕಾಂ ಸಿಬ್ಬಂದಿಯನ್ನು ಇಂದು ಬೆಳಿಗ್ಗೆ ಸಂಪರ್ಕ ಕೊಡಲು ಕರೆಸಿದೆ, ಮೇಲಾಧಿಕಾರಿಗಳ ಸೂಚನೆ ಇಲ್ಲದೆ ಸಿಬ್ಬಂದಿ ಬೆಳಿಗ್ಗೆಯಿಂದ ಕಾದು ಕಾದು ಸುಸ್ತಾಗಿ ಬೇರೆ ಕೆಲಸದ ನಿಮಿತ್ತ ಆ ಸಿಬ್ಬಂದಿ ವಿದ್ಯುತ್ ಸಂಪರ್ಕ ಕಲ್ಪಿಸದೆ ಹಿಂದಿರುಗಿರು. ಪ್ರಸ್ತುತ ವರ್ಷ ಬಿಸಿಲಿನ ತಾಪ ಹೆಚ್ಚಳವಿದ್ದು, ಕೃಷಿ ಬೆಳೆಗಳನ್ನು ಕಾಪಾಡಿಕೊಳ್ಳಲು ರೈತರು ಹರಸಾಹಸಪಡುವಂತಾಗಿದೆ. ಕೃಷಿ ಬೆಳೆಗಳಿಗೆ ನೀರುಣಿಸಲು ವಿದ್ಯುತ್ ಪರಿಕರಗಳು ಹಾಳಾದರೆ ರೈತರನ್ನು ಸತಾಯಿಸದೆ ತಕ್ಷಣವೇ ಅಧಿಕಾರಿಗಳು ಸೂಕ್ತ ಪರಿಹಾರ ಕಲ್ಪಿಸಬೇಕು ಎಂದು ಆಗ್ರಹಿಸಿದರು. ರೈತರ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವ ಅಧಿಕಾರಿಗಳ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಜೆಸ್ಕಾಂ ಉನ್ನತ ಅಧಿಕಾರಿಗಳು ಗಮನಹರಿಸಿ ಸೂಕ್ತ ಕ್ರಮವಹಿಸಬೇಕು ಎಂದು ರೈತರು ಆಗ್ರಹಿಸಿದರು.



> ಜೆಸ್ಕಾಂ ಸೆಕ್ಷನ್ ಆಫೀಸರ್ ನುಣುಚಿಕೊಳ್ಳುವ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಅವರ ಬಳಿ ಫೈಲ್ ಬರೆದೆ ನಮ್ಮ ಜಮೀನಿಗೆ ಟ್ರಾನ್ಸ್ ಫಾರ್ಮ್‌ರ್ ಕಳಿಸಿದ್ರಾ, ಅವರು ಕೊಡುವ ಉತ್ತರ ಸೂಕ್ತವಲ್ಲ. ಈ ಬಗ್ಗೆ ಮೇಲಾಧಿಕಾರಿಗಳು ಗಮನ ಹರಿಸಬೇಕು.
> **– ಶಾನುಭೋಗರ ರಾಜಣ್ಣ**
> ರೈತರು, ತಿಮಲಾಪುರ ಗ್ರಾಮ.

> ತಿಮಲಾಪುರ ಗ್ರಾಮದ ಶಾನುಭೋಗರ ರಾಜಪ್ಪ ಅವರ ಟ್ರಾನ್ಸ್ ಫಾರ್ಮ್‌ರ್ ಪೈಲ್ ಗುತ್ತಿಗೆದಾರ ತಡವಾಗಿ ತಲುಪಿಸಿದ್ದಾರೆ, ತಪ್ಪು ನನ್ನದಲ್ಲ ಗುತ್ತಿಗೆದಾರನದ್ದು, ಈಗ ಪೈಲ್ ಬಂದಿದೆ ಅಲ್ಲಿನ ಸಿಬ್ಬಂದಿಗೆ ಹೇಳಿ ಸಂಪರ್ಕ ಕೊಡುಸುವೆ.
> **– ಎ.ಕೊಟ್ರೇಶ್,**
> ಜೆಸ್ಕಾಂ ಸೆಕ್ಷನ್ ಆಫೀಸರ್, ಗ್ರಾಮೀಣ ವಿಭಾಗ.




ಹಂಪಿ ಟೈಮ್ಸ್ HAMPI TIMES

## ವಚನ ಅರಿವು

### ನಡೆ, ನುಡಿಯ ದೀಪ

**ತನಗೆ ಮುನಿವರಿಗೆ ತಾ ಮುನಿಯಲೇಕಯ್ಯಾ?**
**ತನಗಾದ ಆಗೇನು? ಅವರಿಗಾದ ಚೇಗೇನು?**
**ತನುವಿನ ಕೋಪ ತನ್ನ ಹಿರಿತನದ ಕೇಡು.**
**ಮನದ ಕೋಪ ತನ್ನ ಅರಿವಿನ ಕೇಡು.**
**ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ**
**ನೆರೆಮನೆಯ ಸುಡದು ಕೂಡಲಸಂಗಮದೇವಾ.**

**– ಬಸವಣ್ಣ**

ಯಾರಾದರೂ ನಮ್ಮ ಮೇಲೆ ಕೋಪಗೊಂಡರೆ ಅವರ ಮೇಲೆ ನಾವು ಕೋಪ ಮಾಡಿಕೊಳ್ಳಬಾರದು. ಅದರಿಂದ ತನಗಾಗುವ ಲಾಭವೇನು? ಸುಖವೇನು? ಏನೂ ಇಲ್ಲ. ಅವರಿಗಾಗುವ ನಷ್ಟವೇನು? ದುಃಖವೇನು? ಸುಮ್ಮನೆ ಕೋಪ ಮಾಡಿಕೊಂಡರೆ ಏನೂ ಬರುವುದಿಲ್ಲ, ಬದಲಾಗಿ ಸಮಸ್ಯೆಗಳೇ ಉಂಟಾಗುತ್ತವೆ. ಕೋಪ ಬಂದಿದೆ ಎಂದು ಇನ್ನೊಬ್ಬರ ಮೇಲೆ ಕೈ ಮಾಡಿದರೆ, ಕೈ ಮಾಡಿದವನು ತುಂಬ ಸಣ್ಣವನಾಗಿ ಬಿಡುತ್ತಾನೆ. ಮನಸ್ಸಿನಲ್ಲಿ ಕೋಪ ಮಾಡಿಕೊಂಡು ದ್ವೇಷ ಸಾಧಿಸುತ್ತ ಅವರಿಗೆ ಕೇಡು ಬಯಸುತ್ತಿದ್ದರೆ, ಮನಸ್ಸು ಶುದ್ಧವಾಗಿರುವುದಿಲ್ಲ, ತನ್ನ ಅರಿವು ಕಾಣದೆ ತಿಳುವಳಿಕೆಯೇ ನಷ್ಟವಾಗಿಬಿಡುತ್ತದೆ. ಮನೆಯೊಳಗೆ ಹೊತ್ತಿಕೊಂಡ ಬೆಂಕಿ ಮೊದಲು ತಾನಿರುವ ಜಾಗದಿಂದಲೇ ಸುಡುತ್ತ ಇಡೀ ಮನೆಯನ್ನು ಸುಡುತ್ತದೆ. ಹಾಗೆ ನಮ್ಮೊಳಗಿನ ಕೋಪವೆಂಬ ಬೆಂಕಿ ನಮ್ಮನ್ನು ಸುಡುವ ಮುಂಚೆ ಆರಿಸಿ ಸಮಾಧಾನದ ಅರಿವಿನಿಂದ ಬದುಕುವುದನ್ನು ರೂಢಿ ಮಾಡಿಕೊಳ್ಳಬೇಕು. ಜೀವನದ ದಾರಿ ಸುಗಮವಾಗಿರಲು ನಾವು ಪಾಲಿಸಬೇಕಾದ ನಡೆ, ನುಡಿಯೇ ದೀಪವಾಗಿದೆ ಎನ್ನುತ್ತದೆ ಬಸವಣ್ಣನ ಈ ವಚನ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬೆಳಕಿನ ಹಾದಿ

### ವಿದ್ಯೆ ಅಮೂಲ್ಯ ಸಂಪತ್ತು



■ **ಸುವರ್ಣ ಭಟ್**

ಕಲಿಯಲು ಸೂಕ್ತ ಕಾಲ ಬಂದಾಗ ಅಂತಹ ಅವಕಾಶ ಕಳೆದುಕೊಳ್ಳದೆ ಅದರ ಸದುಪಯೋಗ ಪಡೆಯಬೇಕು.

ಅಕ್ಷಯ್ ತುಂಬಾ ಒಳ್ಳೆಯ ಹುಡುಗ. ಶಾಲೆಯಲ್ಲಿಯೂ ಯಾವುದೇ ಗಲಾಟೆಗಳ ಮಾಡಿಕೊಳ್ಳದೇ, ಶಾಲೆಗೆ ಹೋಗಿ ಬರುತ್ತಿದ್ದ.

"ಅಕ್ಷಯ್ ನ ಕೆಟ್ಟ ಗುಣವೆಂದರೆ , ಚೆನ್ನಾಗಿ ಅಭ್ಯಾಸ ಮಾಡದೆ ಇರುವುದು. ಬರೆಯಲು, ಓದಲು ಮಾತ್ರ ತುಂಬಾ ಸೋಮಾರಿಯಾಗಿದ್ದ. ಮಗನ ವಿದ್ಯಾಭ್ಯಾಸದ ಜವಾಬ್ದಾರಿ ತೆಗೆದುಕೊಂಡ ತಾಯಿ ,ಶಾಲೆಗೆ ಪಾಲಕರ ಸಭೆಗೆ ಹೋದಾಗಲೆಲ್ಲ, ನಿಮ್ಮ ಮಗ ಒಳ್ಳೆಯ ಮನಸ್ಸಿನವನು,ಆದರೆ ಓದಲು ಬರೆಯಲು ಪ್ರಯತ್ನ ಪಡುವುದಿಲ್ಲವೆಂದರು".

"ನಾನು ಹೇಳಿ ಕೊಟ್ಟರು ಹುಡುಗನಿಗೆ ಓದುವುದರಲ್ಲಿ ಆಸಕ್ತಿ ಇಲ್ಲವೆಂದು ತಾಯಿಗೆ ಬಹಳ ಬೇಸರವಾಯಿತು.

ಅಕ್ಷಯ್ ನ ಕೇಳಿದರೆ , ನನಗೆ ಓದಿನಲ್ಲಿ ಆಸಕ್ತಿ ಇಲ್ಲ ಎಂದು ಬಿಟ್ಟ.

ಒಂದು ದಿನ ಅಕ್ಷಯ್ ನ ತಾಯಿ ಆತನ ಶಾಲೆಯಿಂದ ಕರೆದುಕೊಂಡು ಬರುವಾಗ ಅವನಿಗಿಂತ ಎರಡು ವರ್ಷ ದೊಡ್ಡವನಾದ ಅದೇ ಊರಿನ ರಾಮಚಂದ್ರ ದೊಡ್ಡ ,ದೊಡ್ಡ ಚೀಲಗಳ ಕಷ್ಟ ಪಟ್ಟು ಹೊತ್ತು ನಡೆಯುತ್ತಿರುವುದು ಕಾಣಿಸಿತು.

ಅಕ್ಷಯ್ ನ ತಾಯಿ ಆತನ ತಡೆದು ನಿಲ್ಲಿಸಿ ರಾಮಚಂದ್ರ ಯಾವ ಕಡೆ ಹೋಗುತ್ತಿರುವೆ. ಶಾಲೆ ಕಲಿತು ಮುಗಿತಾ ? ಎಂದರು.

ಆಗ ರಾಮಚಂದ್ರ " ಇಲ್ಲ. ನಾನು ಓದಲು ಇಷ್ಟ ವಿಲ್ಲವೆಂದು ಓದನ್ನು ಬಿಟ್ಟೆ . ಮನೆಯಲ್ಲಿ ಒತ್ತಾಯಮಾಡಿದರು ನಾನು ಶಾಲೆಗೆ ಹೋಗಲಿಲ್ಲ. ನಂತರ ನಮ್ಮ ತಂದೆ ತಮ್ಮನಿಗೆ ಕಲಿಸಿದರು. ನನ್ನ ಕೆಲಸಕ್ಕೆ ಹಚ್ಚಿದರು.ಆಗದಿದ್ದರು ಈಗ ಕೆಲಸ ಮಾಡುವುದು ಅನಿವಾರ್ಯ ನನಗೆ . ದಿನಾಲೂ ಈ ಬೆರಣಿಗಳ ಎಲ್ಲೆಲ್ಲೋ ಹೋಗಿ ಆರಿಸಿಕೊಂಡು ತರಬೇಕು. ಈಗ ನಾನು ಶಾಲೆಗೆ ಹೋಗಬೇಕಿತ್ತು ಅನಿಸುತ್ತದೆ. ಆದರೆ ಅದು ಈಗ ಸಾಧ್ಯವಿಲ್ಲ. ಬರ್ತೀನಿ ಎಂದು ರಾಮಚಂದ್ರ ಮನೆ ದಾರಿ ಹಿಡಿದ".

ಮನೆಗೆ ಹೋದ ನಂತರ ತಾಯಿ ಅತನ ಕೂರಿಸಿಕೊಂಡು, ಮಗಾ ವಿದ್ಯೆ ಅಮೂಲ್ಯ ಸಂಪತ್ತು. ಕಲಿಯಲು ಅವಕಾಶ ಸಿಕ್ಕಾಗ ಕಲಿಯಬೇಕು. ಇಲ್ಲವಾದರೆ ಮುಂದೆ ಮನೆ ಕೆಲಸ, ಕೂಲಿ ಕೆಲಸ ಮಾಡಿಕೊಂಡು ಇರಬೇಕು. ರಾಮಚಂದ್ರಣ್ಣನ ಹಾಗೇ ಚಿಕ್ಕ ವಯಸ್ಸಿನಲ್ಲಿ ಕಷ್ಟ ಪಡಬೇಕು ಎಂದರು. ತಾಯಿಯ ಮಾತು ಅಕ್ಷಯ್ ನಿಗೂ ಸರಿ ಎನಿಸಿತು. ಅಂದಿನಿಂದ ಚೆನ್ನಾಗಿ ಓದಿ, ಬರೆದು ಒಳ್ಳೆಯ ಅಂಕ ತೆಗೆದುಕೊಂಡ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 9448633038

# ಜೂಡೋ ಸಾಧಕಿ ರೋಹಿಣಿ ಪಾಟೀಲ್

## ಕದನ ಕಲೆ (ಜೂಡೋ) ಕ್ರೀಡೆಗೆ ದೊರೆಯಲಿ ಆದ್ಯತೆ | ಸರ್ಕಾರದ ಪ್ರೋತ್ಸಹದತ್ತ ಕ್ರೀಡಪಟುಗಳ ಚಿತ್ತ

ತಮಗಿಷ್ಟವಾದ ಕ್ರೀಡೆಗಳಲ್ಲಿ ಆಸಕ್ತಿ ಹೆಚ್ಚಿಸಿಕೊಂಡು, ಸಕ್ರಿಯವಾಗಿ ಭಾಗವಹಿಸಿದರೆ ಅದರಿಂದ ಮಾನಸಿಕ ಹಾಗೂ ದೈಹಿಕ ಸದೃಢ ಬೆಳವಣಿಗೆ ನಮ್ಮದಾಗಿಸಕೊಳ್ಳುವುದರೊಂದಿಗೆ ಊರು, ಜಿಲ್ಲೆ, ರಾಜ್ಯ, ದೇಶ ಕೀರ್ತಿ ಹೆಚ್ಚಿಸಬಹುದು ಎಂಬುದನ್ನು ಅನೇಕರು ಸಾಬೀತುಪಡಿಸಿದ್ದಾರೆ. ಅಲ್ಲದೆ ಕ್ರೀಡೆಗಳು ಹಲವರಿಗೆ ಮನೋರಂಜನೆ ನೀಡಿದರೆ, ಅನೇಕ ಕ್ರೀಡಾಪಟುಗಳ ಜೀವನಕ್ಕೆ ಆಧಾರಸ್ತಂಭವಾಗಿವೆ. ಅಂತಹ ಕ್ರೀಡಾಸಾಧಕರ ಕಿರುಪರಿಚಯ, ಅವರ ಅನುಭವಗಳನ್ನು ಕ್ರೀಡಾಸಕ್ತರಿಗೆ ಹಂಪಿ ಟೈಮ್ಸ್ ಪ್ರಕಟಿಸುತ್ತಾ ಬಂದಿದ್ದು, ಈ ಬಾರಿ ಬೆಳಗಾವಿ ಜಿಲ್ಲೆಯ ಚಂದಗಡ್ ಗ್ರಾಮದ ಅಂತರಾಷ್ಟ್ರೀಯ ಜುಡೋ ಕ್ರೀಡಾ ಸಾಧಕಿಯ ಕುರಿತು ತಿಳಿಯೋಣ ಬನ್ನಿ.

ಬೆಳಗಾವಿಯ ಜಿಲ್ಲೆಯ ಬಾಬುರಾವ್ ಪಾಟೀಲ್ ಮತ್ತು ಪಾರ್ವತಿ ಪಾಟೀಲ್ ದಂಪತಿಯ ನಾಲ್ಕನೆ ಸುಪುತ್ರಿ ರೋಹಿಣಿ ಪಾಟೀಲ್ ಪ್ರಾಥಮಿಕ ಶಾಲಾ ಹಂತದಲ್ಲೆ ಓದಿನೊಂದಿಗೆ, ಕ್ರೀಡಾಸಕ್ತಿಯನ್ನೂ ಬೆಳೆಸಿಕೊಂಡು ಕಬಡ್ಡಿಯಲ್ಲಿ ಭಾಗವಹಿಸುತ್ತಿದ್ದರು. ಇವರ ಸಂಬಂಧಿ ಪಂಕಜ್ ಜುಡೋ ಕ್ರೀಡೆಯಲ್ಲಿ ರಾಷ್ಟ್ರೀಯ ಚಿನ್ನದ ಪದಕ ಗಳಿಸಿದ ಸಾಧನೆ ಇವರಿಗೆ ಪ್ರೇರಣೆಯಾಯಿತು. ಜುಡೋ ಕ್ರೀಡೆಯ ಮೇಲೆ ಆಸಕ್ತಿ ಹೊಂದಿ ಬೆಳಗಾಂನ ಯುವಜನ ಸೇವಾ ಇಲಾಖೆಯ ಅಡಿಯಲ್ಲಿ ತರಬೇತಿಗೆ ಆಯ್ಕೆಯಾಗುತ್ತಾರೆ. ತರಬೇತುದಾರರಾದ ತ್ರಿವೇಣಿ ಮತ್ತು ಜಿತೇಂದ್ರ ಸಿಂಗ್ ಆಟದ ಪಟ್ಟುಗಳನ್ನು ಕಲಿಸಿಕೊಡುತ್ತಾರೆ. ಕುಟುಂಬದವರು ಕ್ರೀಡೆ ಹಾಗೂ ತರಬೇತಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಪ್ರೋತ್ಸಾಹಿಸಿದ್ದರಿಂದ ಹಂತ ಹಂತವಾಗಿ ಜುಡೋ ಕ್ರೀಡೆಯಲ್ಲಿ ಈ ಭಾಗದ ಎಲ್ಲರ ನಿರೀಕ್ಷೆಗೂ ಮೀರಿ ಸಾಧನೆ ಮಾಡಿ, ಜಿಲ್ಲೆ ಹಾಗೂ ರಾಜ್ಯದ ಕೀರ್ತಿ ಪತಾಕೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಹಾರಿಸಿದ್ದಲ್ಲೆ ಏಕಲವ್ಯ ಪ್ರಶಸ್ತಿ ಜೊತೆಗೆ ಅನೇಕ ಚಿನ್ನ, ಬೆಳ್ಳಿ, ಕಂಚು, ನಗದು ಬಹುಮಾನಗಳನ್ನು ತನ್ನದಾಗಿಸಿಕೊಂಡು ಗೆಲುವಿನ ನಗೆ ಬೀರುವುದರ ಜೊತೆ ಅನೇಕ ಯುವ ಜುಡೋ ಆಸಕ್ತರಿಗೆ ತರಬೇತಿಂ ನೀಡಿ, ಕ್ರೀಡೆಯನ್ನು ಜೀವಂತಗೊಳಿಸುವುದರ ಜೊತೆಗೆ ಯುವ ಕ್ರೀಡಾಪಟುಗಳ ನೆಚ್ಚಿನ ತರಬೇತುದಾರರಾಗಿದ್ದಾರೆ.

**ಕೌಟುಂಬಿಕ ಹಿನ್ನೆಲೆ ಮತ್ತು ವಿದ್ಯಾಭ್ಯಾಸ**

ತಂದೆ–ಬಾಬುರಾವ್ ಪಾಟೀಲ್, ತಾಯಿ–ದಿ.ಪಾರ್ವತಿ ಪಾಟೀಲ್ ಇವರ 04 ಮಕ್ಕಳಲ್ಲಿ ಇವರು ಕೊನೆಯವರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಂದಗಡ್ದಲ್ಲಿ ಪ್ರಾಥಮಿಕ ಶಿಕ್ಷಣ, ಜಿಜಾ ಮಾತ ಶಾಲೆಯಲ್ಲಿ ಪ್ರೌಢ ಶಿಕ್ಷಣವನ್ನು, ಫೀನಿಕ್ಸ್ ಪದವಿ ಪೂರ್ವ ಕಾಲೇಜಿನಲ್ಲಿ ಪಿ.ಯು., ಸಿ.ಬಿ.ಎ. ಪದವಿಯನ್ನು ಮರಾಠ ಮಂಡಲ ಬೆಳಗಾವಿ, ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ಎಂ.ಎ.(ಹಿಂದಿ) ಪದವಿ, ದಕ್ಷಿಣ ಭಾರತ್ ಹಿಂದೂ ಪ್ರಚಾರ ಸಭಾ ಮದ್ರಾಸ್ ಹಿಂದಿ ವಿಷಯದಲ್ಲಿ ಎಂ,ಫಿಲ್. ಪದವಿಯನ್ನು ಗಳಿಸಿರುತ್ತಾರೆ. ಜೂಡೋ ಕ್ರೀಡೆಯಲ್ಲಿ ತರಬೇತುದಾರರಾಗಿ'ಎ'ಶ್ರೇಣಿಯೊಂದಿಗೆ 2018–19 ರಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಇನ್ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ ಪಟಿಯಾಲಾ, ಪಂಜಾಬ್ ಇಲ್ಲಿ ಡಿಪ್ಲೋಮಾ ಪದವಿಯನ್ನು ಪಡೆದಿರುತ್ತಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

**ಕ್ರೀಡಾ ಸಾಧನೆಗಳು:**

ಅಂತರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯಮಟ್ಟದಲ್ಲಿ ಹಲವಾರು ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಈ ಕೆಳಕಂಡ ಕ್ರೀಡಾ ಸಾಧನೆಯನ್ನು ಮಾಡಿರುತ್ತಾರೆ ಅವುಗಳೆಂದರೆ.

**ಅಂತಾರಾಷ್ಟ್ರೀಯ:**

1.ಸೌತ್ ಏಷಿಯನ್ ಜೂಡೋ ಚಾಂಪಿಯನ್ಶಿಪ್(2008–ನೇಪಾಳ) ಚಿನ್ನದ ಪದಕ.
2.ಏಷ್ಯನ್ ಜೂಡೋ ಚಾಂಪಿಯನ್ಶಿಪ್(2008–ಹೇಮನ್) ಕಂಚು.
3.2008 (ಬ್ಯಾಂಕಾಕ್)ವಿಶ್ವ ಜೂಡೋ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿ ರಾಷ್ಟ್ರಕ್ಕೆ ಕೀರ್ತಿ ತಂದಿರುತ್ತಾರೆ.








**ರಾಷ್ಟ್ರೀಯ:**

1.2007–08(ಜಾರ್ಖಂಡ್)34ನೇ ಸೀನಿಯರ್ ನ್ಯಾಷನಲ್ ಗೇಮ್ಸ್ ನಲ್ಲಿ ಚಿನ್ನ.
2.2011–12(ಕೊಲ್ಕತ್ತ)ಸೀನಿಯರ್ ನ್ಯಾಷನಲ್ ಚಾಂಪಿಯನ್ಶಿಪ್ ನಲ್ಲಿ ಬೆಳ್ಳಿ.
3.ಛತ್ತಿಸ್ಗಢ(2006–07)ಜೂನಿಯರ್ ನ್ಯಾಷನಲ್ ಜೂಡೋ ಚಾಂಪಿಯನ್ಶಿಪ್ ನಲ್ಲಿ ಚಿನ್ನ.
4.ಮಣಿಪುರ(2007–08)ಜೂನಿಯರ್ ಜೂಡೋ ಚಾಂಪಿಯನ್ಶಿಪ್ ನಲ್ಲಿ ಚಿನ್ನ.
5.ಉತ್ತರಖಂಡ,ಹರಿದ್ವಾರ(2009–10) ಸೀನಿಯರ್ ನ್ಯಾಷನಲ್ ಜೂಡೋ ಚಾಂಪಿಯನ್ಶಿಪ್ ನಲ್ಲಿ ಕಂಚು.
6.ಸೀನಿಯರ್ ಜೂಡೋ ಫೆಡರೇಶನ್ ಕಪ್(2005–06 ಇಸಾರ)ಕಂಚು.
7.ವಿಜಯವಾಡ(2010–11)ಸೀನಿಯರ್ ಜೂಡೋ ಫೆಡರೇಶನ್ ನಲ್ಲಿ ಬೆಳ್ಳಿ. ಇದರೊಂದಿಗೆ ರಾಜ್ಯ ಮಟ್ಟದ ಪಂದ್ಯಾವಳಿಗಳಲ್ಲಿ ಕ್ರೀಡಾಪಟುವಾಗಿ ಭಾಗವಹಿಸಿ ಸಾಕಷ್ಟು ಪದಕಗಳನ್ನು ಗಳಿಸಿರುತ್ತಾರೆ.

**ಮುಡಿಗೇರಿಸಿಕೊಂಡ ಪದಕಗಳು:**

ಅಂತರಾಷ್ಟ್ರೀಯ ಮಟ್ಟದಲ್ಲಿ 01ಚಿನ್ನ, 01 ಕಂಚು, ರಾಷ್ಟ್ರೀಯ ಮಟ್ಟದಲ್ಲಿ 03 ಚಿನ್ನ, 02 ಬೆಳ್ಳಿ, 02 ಕಂಚು ಮತ್ತು ರಾಜ್ಯಮಟ್ಟದಲ್ಲಿ 08 ಚಿನ್ನ, 01 ಕಂಚಿನ ಪದಕಗಳನ್ನು ವೈಯಕ್ತಿಕವಾಗಿ ಪಡೆದಿರುತ್ತಾರೆ.

**ಕ್ರೀಡಾ ತರಬೇತುದಾರರಾಗಿ ಸಾಧನೆ:**

ಇವರ ವಿದ್ಯಾರ್ಥಿಗಳು ರಾಷ್ಟ್ರಮಟ್ಟದಲ್ಲಿ 15 ಚಿನ್ನ, 04 ಬೆಳ್ಳಿ 16 ಕಂಚು ಒಟ್ಟು–35 ಪದಕಗಳನ್ನು ಗಳಿಸಿರುತ್ತಾರೆ.

ರಾಜ್ಯಮಟ್ಟದ ಸಾಧನೆಯನ್ನು ಗಮನಿಸುವುದಾದರೆ 72 ಚಿನ್ನ, 29 ಬೆಳ್ಳಿ, 02 ಕಂಚು ಒಟ್ಟು–127 ಪದಕಗಳನ್ನು ಗಳಿಸಿರುತ್ತಾರೆ.

ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿರುವ ಯುವಜನ ಸೇವಾ ಇಲಾಖೆಯಲ್ಲಿ ತರಬೇತುದಾರರಾಗಿ ಕಾರ್ಯನಿರ್ವಹಿಸಿ,ಸದ್ಯ ಬೆಳಗಾವಿಯಲ್ಲಿ ತರಬೇತುದಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಯುವ ಕ್ರೀಡಾಳುಗಳಿಗೆ ಕರೆ:**

ಪುರುಷರಂತೆ ಮಹಿಳೆಯರು ಸಹ ಎಲ್ಲಾ ರೀತಿಯ ಕ್ರೀಡೆಯಲ್ಲಿ ಭಾಗವಹಿಸಬಹುದಾಗಿದೆ.

ಮಹಿಳೆಯರು ತಮ್ಮನ್ನು ತಾವು ಸ್ವಯಂ ರಕ್ಷಣೆ ಮಾಡಿಕೊಳ್ಳಲು ಜೂಡೋ ಕ್ರೀಡೆಯು ಸಾಕಷ್ಟು ಸಹಕಾರಿ.

ಆರೋಗ್ಯ, ದೈಹಿಕ ಸದೃಢತೆ, ಸ್ವಯಂಶಿಸ್ತು, ಉತ್ತಮ ಜೀವನಶೈಲಿ ಹೊಂದಲು ಇದು ಸಹಕಾರಿ.

ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಸಾಧನೆಯನ್ನು ಮಾಡುವ ಮುಖಾಂತರ ಹೆಸರು, ಪ್ರಶಸ್ತಿ, ಪುರಸ್ಕಾರ, ಸರ್ಕಾರಿ ನೌಕರಿ ಪಡೆದು ಸೌಲಭ್ಯವನ್ನು ಗಳಿಸಬಹುದಾಗಿದೆ ಎಂದು ಕರೆ ನೀಡುತ್ತಾರೆ. ಪೋಷಕರು ದಯಮಾಡಿ ತಮ್ಮ ಮಕ್ಕಳನ್ನು ಯಾವುದಾದರೂಂದು ಕ್ರೀಡೆಯಲ್ಲಿ ತೊಡಗುವಂತೆ ಮಾಡುವ ಮುಖಾಂತರ ಸದೃಢ ಭಾರತ ಕಟ್ಟುವಲ್ಲಿ ನೆರವಾಗಬೇಕು. ಅನಗತ್ಯವಾಗಿ ಕಾಲಹರಣ ಮಾಡುವ ಬದಲು ಯುವಕ, ಯುವತಿಯರು ತಮಗೆ ಇಷ್ಟವಾದ ಕ್ರೀಡೆಗಳನ್ನು ಆಯ್ಕೆ ಮಾಡಿಕೊಂಡು ದೇಹವನ್ನು ಸದೃಢವಾಗಿಟ್ಟುಕೊಂಡು ಸಮಯದ ಸದುಪಯೋಗ ಪಡೆದುಕೊಳ್ಳಬಹುದು ಅದರೊಂದಿಗೆ ಜೀವನವನ್ನು ರೂಪಿಸಿಕೊಳ್ಳಬಹುದು ಎಂಬುದು ಇವರ ಅಭಿಮತವಾಗಿದೆ.

**ಸಾಧಕರ ಮನವಿ**

ಭಾರತ ಮತ್ತು ಕರ್ನಾಟಕ ಸರ್ಕಾರ ಕ್ರೀಡಾ ಕ್ಷೇತ್ರಕ್ಕೆ ನೆರವು ನೀಡುತ್ತಿದ್ದು ಇನ್ನಷ್ಟು ವೈಜ್ಞಾನಿಕ ತರಬೇತಿ ಕೇಂದ್ರಗಳು ಹಾಗೂ ತಂತ್ರಜ್ಞಾನ ಯುಕ್ತ ಕ್ರೀಡಾ ಹಾಸ್ಟೆಲ್ಗಳು, ಸಾಧಕರಿಗೆ ಹೆಚ್ಚಿನ ಉದ್ಯೋಗಾವಕಾಶ, ಪ್ರತಿ ತಾಲೂಕು ಹಂತದಲ್ಲಿ ಸರಿಯಾದ ಮಾರ್ಗ ಸೂಚಿಯೊಂದಿಗೆ ಕ್ರೀಡಾಪಟುಗಳನ್ನು ಆಯ್ಕೆ ಮಾಡಲು ನೆರವಾಗುವ ಮಾಹಿತಿ ಕೇಂದ್ರಗಳನ್ನು, ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಪಠ್ಯದೊಳಗೆ ಜೂಡೋ ಕ್ರೀಡೆಯ ಪಾಠದ ಅಳವಡಿಕೆ, ದೈಹಿಕ ಶಿಕ್ಷಕರ ನೇಮಕಾತಿ, ವಿಶೇಷ ತರಬೇತಿ ಹೊಂದಿದ ತರಬೇತುದಾರರ ನೇಮಕಾತಿ ಹಾಗೂ ಇವರಿಂದ ತರಬೇತಿ ನೀಡುವುದರ ಮುಖಾಂತರ ಮಕ್ಕಳನ್ನು ಈ ಕ್ರೀಡೆಯಲ್ಲಿ ಆಸಕ್ತಿ ವಹಿಸುವಂತೆ ಮಾಡಿ, ತರಬೇತಿಯಲ್ಲಿ ತೊಡಗಿಸಿ ರಾಷ್ಟ್ರಕ್ಕೆ ಹೆಚ್ಚು ಪದಕಗಳನ್ನು ತರಬಹುದು ಎಂದು ಮನವಿ ಮಾಡುತ್ತಾರೆ.

**ಸಂದ ಪ್ರಶಸ್ತಿ, ಪುರಸ್ಕಾರಗಳು**

ಸಾಧಕರ ಸಾಧನೆಯನ್ನು ಗಮನಿಸಿ ಕೇಂದ್ರ, ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತವು ಪ್ರಶಸ್ತಿ, ಪುರಸ್ಕಾರಗಳನ್ನು ನೀಡಿ ಗೌರವಿಸಿದೆ ಅವುಗಳಲ್ಲಿ ಪ್ರಮುಖವಾಗಿ. 2008ರಲ್ಲಿ ಕೇಂದ್ರ ಸರ್ಕಾರದಿಂದ 60,000 ಸಾವಿರ ರೂಪಾಯಿಗಳ ನಗದು ಬಹುಮಾನ. 2009 ಕೇಂದ್ರ ಕ್ರೀಡಾ ಮಂತ್ರಿಗಳಿಂದ 50,000 ಸಾವಿರ ರೂಪಾಯಿಗಳ ನಗದು ಬಹುಮಾನ. 2008 ರಲ್ಲಿ ಕರ್ನಾಟಕ ಸರ್ಕಾರದಿಂದ ಏಕಲವ್ಯ ಪ್ರಶಸ್ತಿ. ಕರ್ನಾಟಕ ಸರ್ಕಾರದಿಂದ 2008 ರಲ್ಲಿ ಕೆ.ಓ.ಎ.ಪ್ರಶಸ್ತಿ. 2007 ಮತ್ತು 2009ರಲ್ಲಿ ಜಿಲ್ಲಾಡಳಿತದಿಂದ ಬೆಳಗಾವಿ ಅತ್ಯುತ್ತಮ ಕ್ರೀಡಾಳು ಪ್ರಶಸ್ತಿ. ಡಿ.ವೈ ಇ.ಎಸ್.ಕಮಿಷನರ್ ಇವರಿಂದ ನಗದು ಪುರಸ್ಕಾರ.ಇದಲ್ಲದೆರಾಜ್ಯದಹಲವಾರುಶಿಕ್ಷಣಸಂಸ್ಥೆಗಳು,ಇಲಾಖೆಗಳು ಮತ್ತು ಸಂಘ ಸಂಸ್ಥೆಗಳು ಅತಿಥಿಯಾಗಿ ಆಹ್ವಾನಿಸಿ ಗೌರವಿಸಿದೆ.

ಕ್ರೀಡಾ ಮೈದಾನ ಮತ್ತು ಕ್ರೀಡೆಗೆ ಯಾವುದೇ ಜಾತಿ, ಲಿಂಗ, ಧರ್ಮ ಮತ್ತು ಅಂಗ ನ್ಯೂನ್ಯತೆಯ ತಾರತಮ್ಯವಿಲ್ಲ ಕಠಿಣ ಶ್ರಮ, ಶ್ರದ್ಧೆ, ಸಾಧಿಸುವ ಛಲ, ಸರಿಯಾದ ಮಾರ್ಗದರ್ಶನ ಮತ್ತು ಸೂಕ್ತ ತರಬೇತಿ ಪಡೆದರೆ ಸಾಧಿಸಲು ಸಾಧ್ಯ ಈ ನಿಟ್ಟಿನಲ್ಲಿ ಮಹಿಳಾ ಸಾಧಕಿ ಇನ್ನಷ್ಟು ಸಾಧನೆಗಳನ್ನು ತಮ್ಮ ಶಿಷ್ಯರಿಂದ ಮಾಡಿಸಿ, ದೇಶಕ್ಕೆ ಇನ್ನಷ್ಟು ಪದಕಗಳನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗಳಿಸಲಿ.

ನಿಮಗೆ ಪರಿಚಯವಿರುವ ಕ್ರೀಡಾ ಸಾಧಕರಿದ್ದರೆ ದಯಮಾಡಿ ನನ್ನ ಮೊಬೈಲ್ ಸಂಖ್ಯೆಗೆ ಮಾಹಿತಿ ನೀಡಿ.

# ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆಯಿಂದ ಉಚಿತ ಟೈಲರಿಂಗ್ ತರಬೇತಿ ಮಹಿಳೆಯರ ಸ್ವಾವಲಂಬಿ ಬದುಕಿಗೆ ಸಹಕಾರಿ

## ಯೋಜನೆಯ ಜಿಲ್ಲಾ ನಿರ್ದೇಶಕರು ಸತೀಶ್ ಶೆಟ್ಟಿ ಹೇಳಿಕೆ



■ **ಹಂಪಿ ಟೈಮ್ಸ್ ಕೊಟ್ಟೂರು**

ಡತಿಡಮಹಿಳೆಯರ ಸ್ವಾವಲಂಬಿ ಬದುಕಿಗೆ ಪ್ರೋತ್ಸಾಹ ಮತ್ತು ಆತ್ಮ ಸ್ಥೈರ್ಯ ತುಂಬಲು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕೇಂದ್ರದಿಂದ ಡಾ.ಹೇಮಾವತಿ ವೀ.ಹೆಗಡೆ ಅವರು ಕಲ್ಪಿಸಿದ್ದ ಉಚಿತ 'ಟೈಲರಿಂಗ್ ತರಬೇತಿ"ಯಲ್ಲಿ ಪಡೆದ ಜ್ಞಾನವನ್ನು ಪ್ರತಿಯೊಬ್ಬರು ತಮ್ಮ ಕುಟುಂಬದ ಆರ್ಥಿಕ ಪ್ರಗತಿಗೆ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಯೋಜನೆಯ ಜಿಲ್ಲಾ ನಿರ್ದೇಶಕರು ಸತೀಶ್ ಶೆಟ್ಟಿ ಹೇಳಿದರು.

ಕೊಟ್ಟೂರು ತಾಲೂಕು ಯೋಜನಾ ವ್ಯಾಪ್ತಿಯ ಕಂದಗಲ್ಲು ಕಾರ್ಯಕ್ಷೇತ್ರದ ವರಸಿದ್ಧಿವಿನಾಯಕ ಜ್ಞಾನ ವಿಕಾಸ ಕೇಂದ್ರದಲ್ಲಿ ಸೋಮವಾರ ಏರ್ಪಡಿಸಿದ್ದ ಉಚಿತ ಟೈಲರಿಂಗ ತರಬೇತಿಯ ಸಮಾರೋಪ ಸಮಾರಂಭ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಮಕ್ಕಳಿಗೆ ಒಳ್ಳೆಯ ಸಂಸ್ಕೃತಿ ಸಂಸಾರ ನೀಡುವ ಜವಾಬ್ದಾರಿ ಮನೆಯಲ್ಲಿ ತಾಯಿದು, ಇದರೊಟ್ಟಿಗೆ ಎಚ್ಚರಿಕೆಯಿಂದ ಕುಟುಂಬದ ಆಗು ಹೋಗುಗಳ ಬಗ್ಗೆ ತಿಳಿದುಕೊಂಡು ವ್ಯವಹಾರ, ಉದ್ಯೋಗ ಮಾಡುವದು ಇದು ಪ್ರತಿಯೊಬ್ಬ ಮಹಿಳೆಯ ಸ್ವಾವಲಂಬಿ ಬದುಕಿಗೆ ಹಾಗೂ ಭವಿಷ್ಯಕ್ಕೆ ಬೆಳಕಾಗಲಿದೆ ಎಂದರು.

ಇದೇ ವೇಳೆ ತರಬೇತಿ ಪೂರೈಸಿದ 25 ಜನ ಸದಸ್ಯರಿಗೆ ಪ್ರಮಾಣ ಪತ್ರವನ್ನು ವಿತರಣೆ ಮಾಡಿದರು. ಒಕ್ಕೂಟದ ಅಧ್ಯಕ್ಷರು ಗಂಗಾನಾಯ್ಕ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ತಾಲೂಕು ಯೋಜನಾಧಿಕಾರಿ ನವೀನ ಕುಮಾರ್ ಹೆಚ್.ಡಿ, ಕೇಂದ್ರದ ಹಿರಿಯರು ರತ್ನಮ್ಮ ಮತ್ತು ಗ್ರಾಮ ಪಂಚಾಯತಿ ಸೆಕ್ರೆಟರಿ ಕೊಟ್ರಗೌಡ್ರ ಹಾಗೂ ಟೈಲರಿಂಗ ತರಬೇತಿ ಶಿಕ್ಷಕಿ ಶ್ರುತಿ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸಾವಿತ್ರಿ ಎನ್.ಜೆ, ಸೇವಾಪ್ರತಿನಿಧಿ ಗಂಗಮ್ಮ ಮತ್ತು ವಿಎಲ್ಎ ಸವಿತಾ, ಕೇಂದ್ರದ ಸರ್ವಸದಸ್ಯರು ಪಾಲ್ಗೊಂಡಿದ್ದರು.

With All Your Support Hampi Times Daily E-Paper Now has 50000+ Readers, Thank You

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ

ನಿಮ್ಮ ಹಂಪಿ ಪ್ರವಾಸ ಅನುಭವ

ನೀವು ಹಂಪಿಗೆ ಭೇಟಿ ನೀಡಿದ್ದೀರಾ?
ಈ ಹಿಂದೆ ಹಂಪಿ ಹೇಗಿತ್ತು, ಈಗ ಹೇಗಾಗಿದೆ,
ಮುಂದೆ ಏನೆಲ್ಲಾ ಸೌಲಭ್ಯಗಳು ಪ್ರವಾಸಿಗರಾಗಿ ನೀವು ನಿರೀಕ್ಷಿಸುತ್ತೀರಿ?

ನಿಮ್ಮದೆ ಅಭಿಪ್ರಾಯಗಳನ್ನು 200 ಪದಗಳಲ್ಲಿ ಬರೆದು ಕಳುಹಿಸಿ,
ಹಂಪಿ ಟೈಮ್ಸ್ ಮೂಲಕ ಅಧಿಕಾರಿಗಳ ಗಮನ ಸೆಳೆಯಿರಿ.

ಹಂಪಿ ಪ್ರವಾಸೋದ್ಯಮ ಅಭಿವೃದ್ಧಿಗೆ ನಿಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುವುದರೊಂದಿಗೆ ಪ್ರವಾಸೋದ್ಯಮ ಪ್ರಗತಿಗೆ ಸಹಕರಿಸಿ.
ನಿಮ್ಮ ಅಭಿಪ್ರಾಯದೊಂದಿಗೆ ಹಂಪಿಗೆ ಭೇಟಿ ನೀಡಿದ ಕ್ಷಣದ ನಿಮ್ಮ ಫೋಟೊ ಇರಲಿ. ನಿಮ್ಮ ಅಭಿಪ್ರಾಯಗಳನ್ನು ಈ ಕೆಳಗಿನ ಇ-ಮೇಲ್/ ವಾಟ್ಸಪ್‌ಗೆ ಕಳುಹಿಸಿರಿ.

www.hampitimes.com
epaper.hampitimes.com
hampitimes@gmail.com
@hampitimes
9448633038

ಕವಿ ಮನಸು

## ಅಮರ



ಬಾಲ ನಟನಾದ
ರಾಷ್ಟ್ರ ಪ್ರಶಸ್ತಿ ಪಡೆದ,
ಪ್ರಬುದ್ಧನಾದ
ನಾಯಕ ನಟನಾದ,
ಕನ್ನಡದ ಕೋಟ್ಯಾಧಿಪತಿಯಾದ
ಜನ ಮನ ಗೆದ್ದ
ದಾನ ಧರ್ಮದಲ್ಲಿ
ಕರ್ಣನಾಗಿ ಬೆಳೆದ.,
ಈಗ ನೀನಿಲ್ಲ
ಜಗದಲಿ ಅಮರನಾದ.

– **ಚಂದ್ರಶೇಖರಯ್ಯ** ರೋಣದಮಠ

## ಯಾರ ಕಾದಿಹೆ?



ಚೆಂಗುಲಾಬಿಯ ಸೋದರಿಯೇನು
ಕೇಸರಿ ಬಣ್ಣವ ಹೊಂದಿರುವೆ
ಗಿಡಗಳು ನೋಡಲು ಒಂದೇ ತರವಿದೆ
ತವರದು ಒಂದೇ ಅನಿಸುತಿದೆ

ಬೆಳಗಿನ ಜಾವದಿ ಅರಳುತ ನಗುತಿಹೆ
ಏನಿದು ನಿನ್ನಯ ಹುನ್ನಾರ
ಜೇನನು ಸವಿಯಲು ದುಂಬಿಯ
ಸೆಳೆವುದು
ಸುಂದರವೆನಿಸಿದ ವಯ್ಯಾರ

ನಾಳೆಗೆ ಅರಳಲು ಕಾದಿಹ ಮೊಗ್ಗಿಗೆ
ಕಲಿಸುತಲಿರುವೆಯಾ ನೀ ಪಾಠ
ನೋಡುವ ಕಣ್ಣಿಗೆ ನೀಡುತಲಿರುವೆಯ
ಚೆಲುವಿನ ಸೊಬಗಿನ ರಸದೂಟ

ದೇವನ ಪಾದವ ಸೇರುವ ತವಕವೆ
ಕಾಯುವೆ ಕೀಳುವ ಕರವನ್ನ
ನಾರಿಯ ತುರುಬಲಿ ಮೆರೆಯುವ
ಬಯಕೆಯೆ
ಕಾಯುತಲಿರುವುದು ಯಾರನ್ನ?॥

– **ಪೆರ್ಮುಖ ಸುಬ್ರಹ್ಮಣ್ಯ ಭಟ್**




**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

**ಪುನೀತ್ ರವರ ಕನಸಿನ ಪರಿಸರ ರಕ್ಷಣೆ ಮತ್ತು ವನ್ಯಜೀವಿಗಳ ಕುರಿತ ವಿಶೇಷ ಕಾಳಜಿಯನ್ನು.ಅಪ್ಪು ನಮ್ಮೆಲ್ಲರ ಮನಸ್ಸಿನಲ್ಲಿ ಅಜರಾಮರ, ಮತ್ತೆ ಹುಟ್ಟಿ ಬರಲಿ ಅದೂ ಕರ್ನಾಟಕದಲ್ಲಿ...**

# ಕನ್ನಡದ ಯುವರತ್ನ... ಅಪ್ಪು

ಅವನೊಬ್ಬ ಅಭಿಜಾತ ಕಲಾವಿದ. ಅಭಿನಯವೆನ್ನುವುದು ಆತನಿಗೆ ರಕ್ತಗತವಾಗಿ ಬಂದ ವಿದ್ಯೆ. ಆತನೋರ್ವ ಅರಸು ಕುವರ. ಆತನ ತಂದೆ ಇಡೀ ಕನ್ನಡ ಚಿತ್ರರಂಗವನ್ನು ಪ್ರೀತಿಯಿಂದ ಆಳಿದ ಧೀಮಂತ ಶಕ್ತಿ, ಕನ್ನಡದ ಕಟ್ಟಾಳು, ನಟಸಾರ್ವಭೌಮ, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ನಮ್ಮ ನಿಮ್ಮೆಲ್ಲರ ಮೆಚ್ಚಿನ ಅಣ್ಣಾವ್ರು., ಡಾಕ್ಟರ್ ರಾಜಕುಮಾರ್ ಅವರ ಮಗ. ಮನೆಯಲ್ಲಿ ಮುದ್ದಿನ ಕೊನೆಯ ಮಗ, ಪ್ರೀತಿಯ ಅಪ್ಪು. ಚಿನ್ನದ ತಟ್ಟೆಯಲ್ಲಿಯೇ ಕೈತೊಳೆಯುವಂತಹ, ಪ್ರೀತಿಯ ಸಾಗರದಲ್ಲಿಯೇ ಓಲಾಡುವಂತಹ ವಾತಾವರಣ. ಕಣ್ಣು ನಿಲುಕಿನಲ್ಲಿರುವ, ಆಸೆ ಪಟ್ಟದ್ದೆಲ್ಲವನ್ನು ಪಡೆಯಬಹುದಾದ ವಾತಾವರಣ. ಆದರೂ ಆತನದು ಡೌನ ಟು ಅರ್ಥ ಎಂದು ಹೇಳುತ್ತಾರಲ್ಲ ಅಷ್ಟು ಭೂಮಿ ತೂಕದ ವ್ಯಕ್ತಿತ್ವ.

ಅಪ್ಪು ಮಾಸ್ಟರ್ ಲೋಹಿತ್ ಎಂಬ ಹೆಸರಿನಲ್ಲಿ ಬಣ್ಣ ಹಚ್ಚಿದ್ದು ಕೇವಲ ನಾಲ್ಕು ತಿಂಗಳಿನಲ್ಲಿ. ಮುಂದೆ ಎಂಟು ವರ್ಷದ ಮಗು ಆದಾಗ *ಬೆಟ್ಟದ ಹೂವು*ಚಲನಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಪಡೆದ ನಟನಾ ಚತುರ. ಬಾಲನಟನಾಗಿಯೇ ಭಕ್ತ ಪ್ರಹ್ಲಾದ, ಭಾಗ್ಯವಂತ, ಚಲಿಸುವ ಮೋಡಗಳು, ಯಾರಿವನು ಮುಂತಾದ ಚಿತ್ರಗಳಲ್ಲಿ ಅದ್ವಿತೀಯ ಅಭಿನಯ. ಎರಡು ನಕ್ಷತ್ರಗಳು ಚಿತ್ರದಲ್ಲಂತೂ ಎರಡೆರಡು ಪಾತ್ರಗಳಲ್ಲಿ ಮಿಂಚಿದ ಅಪ್ಪು ಅವರಿಗೆ ಚಲಿಸುವ ಮೋಡಗಳು ಮತ್ತು ಎರಡು ನಕ್ಷತ್ರಗಳು ಚಿತ್ರಕ್ಕೆ ಕರ್ನಾಟಕ ರಾಜ್ಯದ ಅತ್ಯುತ್ತಮ ಬಾಲ ನಟ ಪ್ರಶಸ್ತಿ ದೊರೆತಿದ್ದವು. ಮುಗ್ಧತೆ, ಭಯ, ಭಕ್ತಿ,ಚಾತುರ್ಯ ಪ್ರೌಢ, ಅನಾಥ ಪ್ರಜ್ಞೆ ಹೀಗೆ ಎಲ್ಲವೂ ಬೆರೆತ ನಟನೆ ಆ ಪುಟ್ಟ ಬಾಲಕನಿಗೆ ಕರತಲಾಮಲಕವಾಗಿತ್ತು. ನಟಸಾರ್ವಭೌಮ ಡಾಕ್ಟರ್ ರಾಜ್ ಎದುರು ಲೀಲಾಜಾಲವಾಗಿ ನಟಿಸಿದ ಮುದ್ದುಕುವರ. ಆದರೆ ಆ ಎಲ್ಲ ನಟನೆಗಳ ಹಿಂದೆ ತಾಯಿ ಪಾರ್ವತಮ್ಮ ರಾಜಕುಮಾರ್ ಅವರ ಒತ್ತಾಸೆ ಮತ್ತು ನಟ ಹೊನ್ನವಳ್ಳಿ ಕೃಷ್ಣ ಅವರ ಸತತ ಪ್ರಯತ್ನ ಇದ್ದೇ ಇತ್ತು. ಅಣ್ಣಂದಿರಾದ ಡಾಕ್ಟರ್ ಶಿವರಾಜಕುಮಾರ್ ಮತ್ತು ರಾಘವೇಂದ್ರ ರಾಜಕುಮಾರ್ ಅವರ ಮಾರ್ಗದರ್ಶನ ಮತ್ತು ಅಕ್ಕಂದಿರಾದ ಲಕ್ಷ್ಮಿ ಮತ್ತು ಪೂರ್ಣಿಮಾ ಅವರ ಅಕ್ಕರೆಯ ತಮ್ಮ ಅಪ್ಪು. ಅಣ್ಣನ ಮಕ್ಕಳ ಪಾಲಿಗೆ ಪ್ರೀತಿಯ ಚಿಕ್ಕಪ್ಪ. ಒಳ್ಳೆಯ ಮಾಮ ಕೂಡ.

ಮುಂದೆ ಡಾ. ರಾಜ್ ಅವರ ಎರಡು ನೂರನೇ ಚಿತ್ರ ಪರಶುರಾಮನಲ್ಲಿ ಪುಟ್ಟ ಪಾತ್ರದಲ್ಲಿ ಮಿಂಚಿದ ಅಪ್ಪು ಪೂರ್ಣ ಪ್ರಮಾಣದ ನಾಯಕ ನಟನಾಗಿ ಹೊರಹೊಮ್ಮಿದ್ದು ತಮ್ಮದೇ ಬ್ಯಾನರ್ ನ ಚಿತ್ರ 'ಅಪ್ಪು' ವಿನಲ್ಲಿ.

ಅಪ್ಪು ನಂತರ ಅಭಿ, ಆಕಾಶ್, ಅರಸು, ಹೀಗೆ ಸಾಲು ಸಾಲು ಚಿತ್ರಗಳು ತೆರೆ ಕಂಡವು. ಎಲ್ಲವೂ ಜಯಭೇರಿ ಗಳಿಸಿದವಷ್ಟೇ ಅಲ್ಲ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಎಂದು ಕರೆಯುವಂತೆ ಮಾಡಿದವು. ನಂತರದ್ದು ದಂತಕಥೆ... ಆತ ಕಾಲಿಟ್ಟ ಕಡೆಯೆಲ್ಲ ಪ್ರೀತಿಯ ಓಕಳಿ, ವಾತ್ಸಲ್ಯದ ಆಗರ, ನಯ ವಿನಯದ ಸಾಗರ. ಓರ್ವ ನಟ ಎಲ್ಲರ ಮನೆಯ ಮಗನಾಗುವುದು ಅಷ್ಟು ಸರಳವಲ್ಲ.

ಆತನನ್ನು ಕೇವಲ ನಾಯಕ ನಟನಾಗಿ ಯಾರೂ ನೋಡಲಿಲ್ಲ. ಕನ್ನಡದ ಪ್ರತಿ ಮನೆಯಲ್ಲೂ ಆತ ತುಂಟ ಮಗನಾದ, ಕೀಟಲೆ ಮಾಡುವ ಆದರೆ ಅಷ್ಟೇ ಜವಾಬ್ದಾರಿಯುತವಾದ ಸೋದರನಾದ, ಒಳ್ಳೆಯ ಪ್ರೇಮಿಯಾದ, ಬುದ್ಧಿ ಹೇಳುವ ಅಣ್ಣನಾದ, ತಪ್ಪು ತಿದ್ದಿಕೊಳ್ಳುವ ತಮ್ಮನಾದ, ಹೆಣ್ಣು ಮಕ್ಕಳಿಗೆ ಕೂಡ ಒಳ್ಳೆಯ ಸ್ನೇಹಿತನಾದ, ತಮಾಷೆ ಮಾಡುವ ಸೋದರಳಿಯನಾದ. ತಪ್ಪು ಕಂಡಾಗ ಸಿಡಿದೇಳುವ ಸಿಡಿಗುಂಡಾದ, ಎಲ್ಲರನ್ನೂ ಹುರಿದುಂಬಿಸುವ ನಾಯಕನಾದ, ಮಮತೆಯ ಮಗನಾದ. ಆತನ ಪ್ರತಿಯೊಂದು ಪಾತ್ರಗಳು ವಿಭಿನ್ನ ಆದರೆ ಅಷ್ಟೇ ತೂಕವನ್ನು ಹೊಂದಿದ್ದವು. ನೃತ್ಯದಲ್ಲಂತೂ ಆತ ಕನ್ನಡದ ಮೈಕಲ್ ಜಾಕ್ಸನ್. ಆತನ ಅಭಿನಯದ ರಾಜಕುಮಾರ ಚಲನಚಿತ್ರ ಉನ್ನತಿಯ ಮೇರು ಶಿಖರವನ್ನು ಪರಿಚಯಿಸಿತು. ಎಲ್ಲವನ್ನು ಕಳೆದುಕೊಂಡ ಮೇಲು ಕೂಡ ಪ್ರೀತಿ, ಸಹನೆ, ತಾಳ್ಮೆಯ ನಟನೆ ಕೇವಲ ನಟನೆ ಎನಿಸಿಲಿಲ್ಲ ಪಾತ್ರವೇ ಅವರಾದ ಭಾವ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಆ ಚಿತ್ರದಲ್ಲಿ ಅವರು ಮಾತನಾಡಿದ "ಯೋಗ ಜೀವನದಲ್ಲಿ ಒಂದು ಬಾರಿ ಮಾತ್ರ ಬರುತ್ತೆ ಆದರೆ ಯೋಗ್ಯತೆ ಕೊನೆಯವರೆಗೂ ನಿಲ್ಲುತ್ತೆ" ಮತ್ತು ಮತ್ತು "ನಾವು ಕನ್ನಡಿಗರನ್ನು ಆಳುವವರಲ್ಲ ಕನ್ನಡಿಗರನ್ನು ಪ್ರೀತಿಸುವವರು ಅವರ ಹೃದಯದಲ್ಲಿರುವವರು" ಎಂಬ ಮಾತುಗಳು ಓರ್ವ ಮನುಷ್ಯ ಸಮಾಜದಲ್ಲಿ ಹೇಗೆ ಬದುಕಬೇಕು ಎಂಬುದನ್ನು ಸೂಚಿಸುತ್ತವೆ. ಅವರು ಕೇವಲ ಮಾತನಾಡಲಿಲ್ಲ, ನುಡಿದಂತೆ ನಡೆದರು.

ಬಾಲನಟನಾಗಿ, ವೃತ್ತಿಪರ ನಟನಾಗಿದ್ದ ಅಪ್ಪು ವೃತ್ತಿಪರ ಗಾಯನದಲ್ಲಿ ಉತ್ತಮ ಸಾಧನೆ ಮಾಡಿದರು. ಕೇವಲ ತಮಗಾಗಿ ಮಾತ್ರವಲ್ಲದೆ ಇತರ ನಾಯಕನಟರ ಹಾಡುಗಳಿಗೂ ಕೂಡ ಧ್ವನಿಯಾದರು. ಪಿ ಆರ್ ಕೆ ಆಡಿಯೋ ದ ಸ್ಥಾಪಕರು ಮತ್ತು ಮಾಲೀಕರಾಗಿ ಕೂಡ ಅಪ್ಪು ಕಾರ್ಯ ನಿರ್ವಹಿಸಿದರು. ಇವು ಚಲನಚಿತ್ರದ ಮಾತಾದರೆ ಕಿರುತೆರೆಯಲ್ಲಿ ಮತ್ತೊಂದು ಮೈಲಿಗಲ್ಲನ್ನು ಅವರು ಹಾಕಿಕೊಟ್ಟರು. ಪವರ್ ಸ್ಟಾರ್ ಪುನೀತ್ ರಾಜಕುಮಾರ್ ನಡೆಸಿಕೊಟ್ಟ 'ಕನ್ನಡದ ಕೋಟ್ಯಾಧಿಪತಿ' ಮತ್ತು 'ಫ್ಯಾಮಿಲಿ ಪವರ್' ಕಾರ್ಯಕ್ರಮವನ್ನು ವೀಕ್ಷಿಸಲು ಅದರಲ್ಲಿ ಪಾಲ್ಗೊಳ್ಳಲು ಅಪ್ಪು ಅವರೊಂದಿಗೆ ಮಾತಾಡಲು ಹಾತೊರೆಯುವವರ ಸಂಖ್ಯೆ ಲಕ್ಷ ಲಕ್ಷ. ಆದರೆ ಎಲ್ಲರನ್ನೂ ಅಷ್ಟೇ ಸಹನೆ, ತಾಳ್ಮೆ, ಪ್ರೀತಿ ವಿಶ್ವಾಸದಿಂದ ಮಾತನಾಡಿಸುತ್ತಿದ್ದರು ನಮ್ಮ ಅಪ್ಪು. ಚಿತ್ರೀಕರಣದ ಸೆಟ್ಗಳಲ್ಲಿ ಅವರೆಂದೂ ತಾಳ್ಮೆ ಕಳೆದುಕೊಂಡ ಉದಾಹರಣೆಗಳಿಲ್ಲ. ಅವರ ಸಹನಟರ ಪ್ರಕಾರ ಅವರೊಂದು ಉತ್ಸಾಹದ ಬಗ್ಗೆ, ಅವರು ಕಾಲಿಟ್ಟಲ್ಲೆಲ್ಲ ಜೀವ ಸಂಚಲನವಾಗುತ್ತಿತ್ತು. ತನ್ನ ಜೊತೆಗಿರುವ ಎಲ್ಲ ಸಹ ನಟರ ಜೊತೆಗೆ ಉತ್ತಮ ಬಾಂಧವ್ಯ ಹೊಂದಿದ್ದ ಅವರು ಎಲ್ಲರನ್ನು ಕೇಳುತ್ತಿದ್ದ ಮೊದಲ ಪ್ರಶ್ನೆ ಊಟ ಆಯ್ತಾ ಎಂದು. ಇದು ಆ ದೊಡ್ಮನೆ ಕುಟುಂಬದಿಂದ ಬಳುವಳಿಯಾಗಿ ಬಂದ ಪ್ರೀತಿ ವಿಶ್ವಾಸ.



ನಟನೆ, ಗಾಯನ ಮತ್ತು ಕಿರುತೆರೆಗಳನ್ನೆಲ್ಲ ಬದಿಗಿಟ್ಟು ಅಪ್ಪು ಅವರ ವ್ಯಕ್ತಿತ್ವವನ್ನು ನೋಡಿದರೆ ಅವರು ಓರ್ವ ಉತ್ತಮ ದೇಹಧಾರ್ಡ್ಯ ಪಟು. ಒಳ್ಳೆಯ ಸೈಕ್ಲಿಸ್ಟ್, ಒಳ್ಳೆಯ ಪರಿಸರ ಪ್ರೇಮಿ, ಉತ್ತಮ ಹಾಡುಗಾರ ಮತ್ತು ಚಿತ್ರರಂಗದ ಒಳಗೆ ಮತ್ತು ಹೊರಗೆ ಆತ್ಮೀಯ ಸ್ನೇಹಗಳನ್ನು ಹೊಂದಿರುವ ಕನ್ನಡ ಚಿತ್ರರಂಗದ ಏಕೈಕ ನಟ. ಯಾವುದೇ ಸ್ಟಾರ್ ಇಗೋಗಳಿಲ್ಲದ, ಹಮ್ಮು–ಬಿಮ್ಮು ತೋರದ, ಎಲ್ಲರೊಂದಿಗೂ ಮುಕ್ತವಾಗಿ ಬೆರೆಯುತ್ತಿದ್ದ ನಟ ಪುನೀತ್ ರಾಜ್. ಸಹ ನಟರಿಗೆ ಕಿಂಚಿತ್ತು ಕೀಳರಿಮೆ ಹುಟ್ಟದಂತೆ ಅವರೊಂದಿಗೆ ನಡೆದುಕೊಳ್ಳುತ್ತಿದ್ದ, ನಿರ್ದೇಶಕರು ಬಯಸಿದಂತಹ ನಟನೆ ನೀಡುವಲ್ಲಿ ಯಶಸ್ವಿಯಾದ ನಟ.

1999 ರಲ್ಲಿ ತಾವು ಮೆಚ್ಚಿದ ಚಿಕ್ಕಮಂಗಳೂರಿನ ಅಶ್ವಿನಿ ಅವರನ್ನು ಹಿರಿಯರ ಆಶೀರ್ವಾದದೊಂದಿಗೆ ಮದುವೆಯಾದ ಪುನೀತ್ ಅವರಿಗೆ ಇಬ್ಬರು ಹೆಣ್ಣು ಮಕ್ಕಳು. ಅವರ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿ ಪತ್ನಿ ಅಶ್ವಿನಿಯವರ ಸಹಾಯ ಸಹಕಾರ ಇದ್ದೇ ಇತ್ತು. ಡಾಕ್ಟರ್ ರಾಜ್ ಮರಣದ ನಂತರ ಅವರ ಕುರಿತ "ದ ಪರ್ಸನ ಬಿಹೈಂಡ್ ದ ಪರ್ಸನಾಲಿಟಿ" ಪುಸ್ತಕದ ಬರವಣಿಗೆಗೆ ಪುನೀತ್ ರವರಿಗಿಂತ ಹೆಚ್ಚು ಶ್ರಮ ಪಟ್ಟಿದ್ದು, ಚಿತ್ರಗಳನ್ನು ವಿಷಯಗಳನ್ನು ಸಂಗ್ರಹಿಸಿದ್ದು ಶ್ರೀಮತಿ ಅಶ್ವಿನಿ ಅವರು. ತಮ್ಮ ಬಿಡುವಿರದ ವೃತ್ತಿ ಜೀವನದ ನಡುವೆಯೂ ಕೂಡ ಪತ್ನಿ ಮತ್ತು ಮಕ್ಕಳಿಗಾಗಿ ಒಳ್ಳೆಯ ಕ್ವಾಲಿಟಿ ಸಮಯವನ್ನು ಪುನೀತ್ ಕಳೆಯುತ್ತಿದ್ದರು. ಪುನೀತ್ ರವರ ಎಲ್ಲಾ ಸಾಮಾಜಿಕ ಕಾರ್ಯ ಚಟುವಟಿಕೆಗಳಲ್ಲಿ ಒತ್ತಾಸೆಯಾಗಿ ನಿಂತವರು ಪತ್ನಿ ಅಶ್ವಿನಿ. ಇಲ್ಲಿಯೂ ಕೂಡ ಪುನೀತ್ ರವರು ತಮ್ಮ ಪತ್ನಿಯನ್ನು ಪ್ರೀತಿಯಿಂದ ಗೌರವದಿಂದ ಕಾಣುತ್ತಿದ್ದುದು ಇಂದಿನ ಯುವ ಜನಾಂಗಕ್ಕೆ ಮಾದರಿ.

ಇದೆಲ್ಲಕ್ಕಿಂತಲೂ ಮುಖ್ಯವಾದ ಇನ್ನೊಂದು ಮುಖ ಅಪ್ಪುವಿಗೆ ಇತ್ತು. ತಾನು ದುಡಿದ ಹಣದಲ್ಲಿ ಸಾಕಷ್ಟು ಪಾಲನ್ನು ವೃದ್ಧಾಶ್ರಮಗಳು, ಅನಾಥಾಶ್ರಮಗಳು, ಅನೇಕ ಗೋವುಗಳ ಪಾಲನೆಗೆ ಯಾರಿಗೂ ಗೊತ್ತಿಲ್ಲದಂತೆ ವಿನಿಯೋಗಿಸುತ್ತಿದ್ದರು ಅಪ್ಪು. ಯಾವುದೇ ಪ್ರಚಾರ ಬಯಸದೆ, ಬಲಗೈಯಲ್ಲಿ ಕೊಟ್ಟದ್ದನ್ನು ಎಡಗೈಗೆ ಗೊತ್ತಾಗದಂತೆ ದಾನ ಮಾಡಿದ ಕಲಿಯುಗದ ಕರ್ಣ ನಮ್ಮ ಅಪ್ಪು. ಸರಿ ಸುಮಾರು 1800 ಅನಾಥ ಮಕ್ಕಳ ಶೈಕ್ಷಣಿಕ ಒಳಿತಿಗಾಗಿ, ಊಟ, ವಸತಿಗಾಗಿ ವ್ಯವಸ್ಥೆ ಮಾಡಿದ್ದು ಪುನೀತ್ ರಾಜ್. ಕರ್ನಾಟಕ ಘನ ಸರ್ಕಾರದ ಸುಮಾರು 20ಕ್ಕೂ ಹೆಚ್ಚು ಜಾಹೀರಾತುಗಳಿಗೆ ಸಂಭಾವನೆ ರಹಿತವಾಗಿ ಕೆಲಸ ನಿರ್ವಹಿಸಿದ್ದು ಅಪ್ಪುವಿನ ಹೆಗ್ಗಳಿಕೆ. ಕರ್ನಾಟಕ ಹಾಲು ಮಹಾ ಮಂಡಳಿಯ ನಂದಿನಿ ಹಾಲಿನ ಉತ್ಪನ್ನಗಳು, ಎಲ್ಇಡಿ ಬಲ್ಬ್ ಯೋಜನೆ, ಪೆಪ್ಸಿಕೋ ಕಂಪನಿ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಗಳ ರಾಯಭಾರಿಯಾಗಿ ಅವರು ಕಾರ್ಯನಿರ್ವಹಿಸಿದರು. ಕರ್ನಾಟಕದ ಎಲ್ಲಾ ರೈತರ ಉತ್ಪನ್ನಗಳಿಗೆ ಮುಖವಾಣಿಯಂತೆ ಕಾರ್ಯನಿರ್ವಹಿಸಿದರು. ಹುಬ್ಬಳ್ಳಿ ಧಾರವಾಡ ನಗರ ಪಾಲಿಕೆಯ ಸ್ವಚ್ಛತಾ ಆಂದೋಲನದ ರಾಯಭಾರಿಯಾಗಿಯೂ ಕೂಡ ಪುನೀತ್ ರಾಜಕುಮಾರ್ ಕಾರ್ಯನಿರ್ವಹಿಸಿದ್ದರು.

ಒಟ್ಟಿನಲ್ಲಿ ನಾಡಿನ ಕಾರ್ಯಕರ್ತರು, ಅಭಿಮಾನಿಗಳು ಒಳ್ಳೆಯ ಕೆಲಸಗಳನ್ನು ಮಾಡಿದಾಗ ಅವರನ್ನು ಮುಕ್ತವಾಗಿ ಪ್ರಶಂಸಿಸುತ್ತಿದ್ದ ಅವರು ತಾವೂ ಕೂಡ ಅವರ ಕಾರ್ಯ ಚಟುವಟಿಕೆಗಳಲ್ಲಿ ಕೈ ಜೋಡಿಸುತ್ತಿದ್ದರು. ಪುನೀತ್ ಡಾಕ್ಟರ್ ರಾಜ್ ರವರ ನಂತರ, ಕನ್ನಡ ಜನತೆಗೆ ದೊರೆತ ಅಮೂಲ್ಯವಾದ ರತ್ನವಾಗಿದ್ದರು.

ಆದರೆ ವಿಧಿ ವೈಪರೀತ್ಯ ನೋಡಿ ..ಎದೆನೋವು ಮತ್ತು ತೀವ್ರ ಹೃದಯಘಾತದಿಂದ ಅವರು ನಮ್ಮನ್ನಗಲಿ ಇಂದಿಗೆ ಒಂದು ವರ್ಷ. ಇಡೀ ಕನ್ನಡ ನಾಡಿಗೆ ಅದು ದುರ್ದೈವದ ದಿನ. ಪ್ರತಿ ಮನೆಯಲ್ಲೂ ಸೂತಕದ ವಾತಾವರಣ. ಏನಾದರೂ ಪವಾಡವಾಗಿ ಅಪ್ಪು ಮತ್ತೆ ಹುಟ್ಟಿ ಬರಲಿ ಎಂಬ ಕಾತರ. ಆದರೆ ಎಲ್ಲರಿಗೂ ಬೇಕಾದ ಅಪ್ಪು ಆ ದೇವರಿಗೂ ಅಷ್ಟೇ ತೀವ್ರವಾಗಿ ಬೇಕಾಗಿದ್ದರು. ತಮ್ಮೆರಡು ಕಣ್ಣುಗಳನ್ನು ದಾನ ಮಾಡಿದ್ದ ಅಪ್ಪು ಅವರ ಕಣ್ಣುಗಳನ್ನು ನಾಲ್ಕು ಜನರು ಅಂಧರಿಗೆ ಅಳವಡಿಸುವ ಮೂಲಕ, ಅಪ್ಪು ಯುವ ಜನತೆಗೆ ಒಂದು ಅಮೂಲ್ಯವಾದ ಪಾಠವನ್ನು ಹೇಳಿಕೊಟ್ಟರು. ಸತ್ತ ನಂತರವೂ ಹೇಗೆ ಬೆಳಕಾಗಬಹುದು, ಬದುಕಾಗಬಹುದು ಎಂಬ ಅಮೂಲ್ಯವಾದ ಜೀವನ ಪಾಠ. ಅಪ್ಪು ಅವರ ಅಂತಿಮ ವಿದಾಯಕ್ಕೆ ಸುಮಾರು 20 ಲಕ್ಷಕ್ಕೂ ಅಧಿಕ ಅಭಿಮಾನಿಗಳು ಬೆಂಗಳೂರಿನ ಕಂಠೀರವ ಕ್ರೀಡಾಂಗಣದ ಹೊರಭಾಗದಲ್ಲಿ ಮತ್ತು ರಸ್ತೆಯುದ್ದಕ್ಕೂ ಸೇರಿದ್ದರು. ಮೃತ್ಯುವಿನಲ್ಲಿಯೂ ಸಾರ್ಥಕತೆ ಕಂಡ ಅಪ್ಪು. ಅಪ್ಪು ಮರಣಾ ನಂತರ ಇಡೀ ರಾಜ್ಯದಲ್ಲೆಡೆ ಯುವಕರು, ಅಭಿಮಾನಿಗಳ ಅಪ್ಪು ಅವರ ಕನಸಿನ ಸಾಕಾರಕ್ಕಾಗಿ ದುಡಿಯುತ್ತಿದ್ದಾರೆ. ಒಳ್ಳೆಯ ಕಾರ್ಯಗಳು ಎಗ್ಗಿಲ್ಲದೆ ನಡೆಯುತ್ತಿದೆ. ರಕ್ತದಾನ ಶಿಬಿರಗಳು, ನೇತ್ರದಾನ ಶಿಬಿರಗಳು, ದೇಹದ ಅಂಗಾಂಗಗಳ ದಾನ, ಅನಾಥಾಶ್ರಮ ವೃದ್ಧಾಶ್ರಮಗಳಿಗೆ ಕೊಡುಗೈ ದಾನ ಹೀಗೆ ಹಲವಾರು ವಿಧಗಳಲ್ಲಿ ಅಪ್ಪು ಹೆಸರಿನಲ್ಲಿ ಕಾರ್ಯಕ್ರಮಗಳ ಆಯೋಜನೆಗಳಾಗುತ್ತಿವೆ. ಆಟಗಳಲ್ಲಿ ಪಾಲ್ಗೊಳ್ಳುತ್ತಿದ್ದ ಅಪ್ಪು ಹೆಸರಿನಲ್ಲಿ ಕ್ರೀಡೆಗಳು, ಉತ್ಸವಗಳು ನಡೆಯುತ್ತಿವೆ. ಅಪ್ಪು ಅವರ ಸ್ಮರಣಾರ್ಥ ಕರ್ನಾಟಕ ಸರ್ಕಾರವು ಯುವ ದಸರಾ ಕಾರ್ಯಕ್ರಮವನ್ನು ಆಯೋಜಿಸಿತ್ತು. ಅಪ್ಪು ಮರಣದ ನಂತರವೂ ಕರ್ನಾಟಕದ ಸಾಂಸ್ಕೃತಿಕ, ಐತಿಹಾಸಿಕ ಮತ್ತು ಕ್ರೀಡಾ ಚಟುವಟಿಕೆಗಳ ಮೂಲಕ ಇಡೀ ಕನ್ನಡ ನಾಡಿನ ಯುವ ಚೇತನವಾಗಿ ಹೊರಹೊಮ್ಮಿದ್ದಾರೆ. ಮರಣೋತ್ತರವಾಗಿ ಕರ್ನಾಟಕ ಸರ್ಕಾರವು ಅಪ್ಪು ಅವರಿಗೆ ನವಂಬರ್ ಒಂದರಂದು ಕರ್ನಾಟಕ ರತ್ನ ಪ್ರಶಸ್ತಿಯನ್ನು ಪ್ರಧಾನ ಮಾಡುತ್ತಿದೆ. ಇತ್ತೀಚೆಗೆ ಇಡೀ ಕನ್ನಡ ಚಿತ್ರರಂಗವು ಒಳಗೊಂಡಂತೆ ಇನ್ನಿತರ ಚಿತ್ರರಂಗದ ಗಣ್ಯರು ಕೂಡ ಪಾಲ್ಗೊಂಡ "ಪುನೀತ ನಮನ" ಕಾರ್ಯಕ್ರಮವು ಅಪ್ಪು ಅವರ ಬಹುಮುಖಿ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿತ್ತು.

ಅವರ ಕೊನೆಯ ಡಾಕ್ಯುಮೆಂಟರಿ ಚಿತ್ರ ಗಂಧದ ಗುಡಿಯಲ್ಲಿ ಅಪ್ಪು ಅವರು ಪರಿಸರ, ಕಾಡುಗಳು, ವನ್ಯಜೀವಿಗಳು ಸರಿಸೃಪಗಳು, ನದಿ ಸಮುದ್ರಗಳು, ಪರಿಸರ ರಕ್ಷಣೆ, ಪ್ಲಾಸ್ಟಿಕ್ ನ ಮಿತ ಬಳಕೆ ಇವುಗಳ ಕುರಿತು ಕರ್ನಾಟಕದ ಹಲವೆಡೆ ತಮ್ಮ ತಂಡದೊಂದಿಗೆ ಕರ್ನಾಟಕ ರಾಜ್ಯದ ಸುಮಾರು ಏಳೆಂಟು ಕಾಡುಗಳಲ್ಲಿ ಸಂಚರಿಸಿ ತಯಾರಿಸಿದ್ದಾರೆ. ಅವರ ಈ ಕೊನೆಯ ಚಿತ್ರವನ್ನು ತಮ್ಮೆಲ್ಲ ಸಹೋದ್ಯೋಗಿಗಳ ಸಹಾಯ ಸಹಕಾರದೊಂದಿಗೆ ಶ್ರೀಮತಿ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಬಿಡುಗಡೆ ಮಾಡಿದ್ದಾರೆ. ಈ ಚಿತ್ರದಲ್ಲಿಯೂ ಕೂಡ ನಾವು ಕಾಣಬಹುದಾದದ್ದು ಪುನೀತ್ ರವರ ಕನಸಿನ ಪರಿಸರ ರಕ್ಷಣೆ ಮತ್ತು ವನ್ಯಜೀವಿಗಳ ಕುರಿತ ವಿಶೇಷ ಕಾಳಜಿಯನ್ನು.ಅಪ್ಪು ನಮ್ಮೆಲ್ಲರ ಮನಸ್ಸಿನಲ್ಲಿ ಅಜರಾಮರ, ಮತ್ತೆ ಹುಟ್ಟಿ ಬರಲಿ ಅದೂ ಕರ್ನಾಟಕದಲ್ಲಿ ಎಂಬ ಆಶಯದೊಂದಿಗೆ.

# ಪರೀಕ್ಷೆಯಲ್ಲಿ ಅಕ್ರಮಗಳಾಗದಂತೆ ಕರ್ತವ್ಯ ನಿರ್ವಹಿಸಿ

## ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿಕೆ । ಪರಿಕ್ಷಾ ಗೊಂದಲ, ಅನಾನುಕೂಲಗಳು ಉಂಟಾಗದಂತೆ ಅಚ್ಚುಕಟ್ಟು ವ್ಯವಸ್ಥೆ ಕಲ್ಪಿಸಿ

■ **ಹಂಪಿ ಟೈಮ್ಸ್ ಕೊಪ್ಪಳ**

ಪರೀಕ್ಷಾ ಅಕ್ರಮಗಳು, ಅನಗತ್ಯ ಗೊಂದಲ, ಅನನುಕೂಲಗಳು ಉಂಟಾಗದಂತೆ ಅಚ್ಚುಕಟ್ಟು ವ್ಯವಸ್ಥೆ ಕಲ್ಪಿಸಿ, ಪರೀಕ್ಷಾ ನಿಯೋಜಿತ ಸಿಬ್ಬಂದಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆಯಿಂದ ಸೋಮವಾರದಂದು ಆಯೋಜಿಸಿದ್ದ 2024ನೇ ಮಾರ್ಚ್/ಏಪ್ರಿಲ್ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳ ಕುರಿತ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾರ್ಚ್ 25 ರಿಂದ ಏಪ್ರಿಲ್ 06 ರವರೆಗೆ ನಡೆಯಲಿರುವ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳನ್ನು ಯಾವುದೇ ಅಕ್ರಮ ಚಟುವಟಿಕೆಗೆ ಅವಕಾಶ ಕೊಡದೇ ಮುಕ್ತ ಹಾಗೂ ನ್ಯಾಯ ಸಮ್ಮತವಾಗಿ ನಡೆಸಬೇಕು. ಈ ನಿಟ್ಟಿನಲ್ಲಿ ಪ್ರಶ್ನೆಪತ್ರಿಕೆ ಖಜಾನೆ ಇಲಾಖೆಗೆ ಠೇವಣಿಯಲ್ಲಿರಿಸಿ. ಪರೀಕ್ಷಾ ದಿನದಂದು ಖಜಾನೆಯಿಂದ ಪ್ರಶ್ನೆಪತ್ರಿಕೆಗಳನ್ನು ತೆಗೆದುಕೊಂಡು ನಿಗದಿತ ಅವಧಿಯೊಳಗೆ ಪರೀಕ್ಷಾ ಕೇಂದ್ರಗಳಿಗೆ ತಲುಪಿಸುವ ಹೊಣೆ ಆಯಾ ಮಾರ್ಗಾಧಿಕಾರಿಗಳಿಗೆ ವಹಿಸಲಾಗಿದ್ದು, ವಿಳಂಬಕ್ಕೆ ಅವಕಾಶವಿಲ್ಲದಂತೆ ಪ್ರಶ್ನೆಪತ್ರಿಕೆಯನ್ನು ನಿಗದಿತ ಅವಧಿಯೊಳಗೆ ತಲುಪಿಸಬೇಕು. ಪರೀಕ್ಷಾ ಕೇಂದ್ರದೊಳಗೆ ಯಾವುದೇ ಬಗೆಯ ಮೊಬೈಲ್ ಫೋನ್, ಕ್ಯಾಲ್ಕುಲೇಟರ್ ಅಥವಾ ಇನ್ನಿತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ಒಯ್ಯುವುದನ್ನು ನಿಷೇಧಿಸಲಾಗಿದೆ. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಸೂಕ್ತ ಆಸನದ ವ್ಯವಸ್ಥೆಯನ್ನು ಆಯಾ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಪರೀಕ್ಷೆ ಬರೆಯುವ ವಿಕಲಚೇತನ ವಿದ್ಯಾರ್ಥಿಗಳಿಗೆ ನೆಲ ಮಹಡಿಯಲ್ಲಿ ಸೂಕ್ತ ಆಸನದ ವ್ಯವಸ್ಥೆ ಮಾಡಬೇಕು. ಅಂಥ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಮತ್ತು ಬರವಣಿಗೆ ಸಹಾಯಕರ ಒಪ್ಪಿಗೆ ಪತ್ರವನ್ನು ಪರಿಶೀಲಿಸಬೇಕು. ಸುಗಮವಾಗಿ ಪರೀಕ್ಷೆ ನಡೆಯುವಂತೆ ಸೂಕ್ತ ಕ್ರಮ ವಹಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಶ್ರೀಶೈಲ ಬಿರಾದಾರ ಅವರು ಮಾತನಾಡಿ, ನಡೆಯಲಿರುವ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗೆ ಜಿಲ್ಲೆಯ ಒಟ್ಟು 25,481 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಜಿಲ್ಲೆಯ ಗಂಗಾವತಿ ತಾಲ್ಲೂಕಿನ 23, ಕೊಪ್ಪಳ ತಾಲ್ಲೂಕಿನ 23, ಕುಷ್ಟಗಿ ತಾಲ್ಲೂಕಿನ 15 ಹಾಗೂ ಯಲಬುರ್ಗಾ ತಾಲ್ಲೂಕಿನ 14 ಸೇರಿದಂತೆ ಒಟ್ಟು 75 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬ ಮುಖ್ಯ ಅಧೀಕ್ಷಕರು ಹಾಗೂ ಪ್ರಶ್ನೆಪತ್ರಿಕೆ ಅಭಿರಕ್ಷಕರನ್ನು ನೇಮಿಸಲಾಗಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಹೆಚ್ಚುವರಿ ಎಸ್‌ಪಿ ಹೇಮಂತ್‌ಕುಮಾರ ಸೇರಿದಂತೆ ವಿವಿಧ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, 75 ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯ ತಾಲ್ಲೂಕು ನೋಡಲ್ ಅಧಿಕಾರಿಗಳು, ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಶೋಭಾಕೃತ

**19–03–2024 – ಮಂಗಳವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುನರ್ವಸು |
| ಯೋಗ | : ಶೋಭನ |
| ಕರಣ | : ತೈತುಲ |
| ಸೂರ್ಯೋದಯ | : 06:32:51 |
| ಸೂರ್ಯಾಸ್ತ | : 18:36:31 |
| ರಾಹು | : 15:36–17:06 |
| ಯಮಘಂಡ | : 09:34–11:04 |
| ಗುಳಿಕ | : 12:35–14:05 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 18–03–2024


| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1582.59 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 831 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.853 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1595.53 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9188 ಕ್ಯುಸೆಕ್ |
| ಸಾಮರ್ಥ್ಯ | 16.276 ಟಿಎಂಸಿ |

# ದೃಶ್ಯಗಳಿಗೆ ಸಂಗೀತ ಸೃಷ್ಟಿಸುವುದು ಕಲೆ

## ರೆಕಾರ್ಡಿಂಗ್ ಸ್ಟುಡಿಯೋ ಸ್ಥಾಪನೆ ಶ್ಲಾಘನೀಯ ಕಾರ್ಯ ಎಂದ ಕುಲಪತಿ ಡಾ.ಡಿವಿ ಪರಮಶಿವಮೂರ್ತಿ

## ಉತ್ತರ ಕರ್ನಾಟಕದ ಕಲಾವಿದರ ಕಲೆಗೆ ಜೀವ ತುಂಬಲಿ। ಸ್ಟುಡಿಯೋ ಉದ್ಘಾಟಿಸಿದ ಡಿಸಿ ಎಂ.ಎಸ್.ದಿವಾಕರ





**ಹಂಪಿ ಟೈಮ್ಸ್ ಹೊಸಪೇಟೆ**

ಸೌಂಡ್ ಎಫೆಕ್ಟ್ ಇಲ್ಲದ ಚಿತ್ರಗಳನ್ನು ಊಹಿಸಿಕೊಳ್ಳಲು ಅಸಾಧ್ಯ ಎನ್ನುವಷ್ಟರ ಮಟ್ಟಿಗೆ ಮ್ಯೂಸಿಕ್ ಪರಿಣಾಮ ಬೀರಿದ್ದು, ಇಂದಿನ ಯುವಪೀಳಿಗೆಗೆ ಕನಸುಗಳಿಗೆ ವೇದಿಕೆಯಾಗಲು ಆರಂಭವಾಗಿರುವ ಎಸ್‌ಎಫ್‌ಎಕ್ಸ್ ಚಾಪ್ ಆಡಿಯೋ ನಿರ್ಮಾಣ ಸಂಸ್ಥೆ ನಿರೀಕ್ಷಿತ ಗುರಿ ಸಾಧಿಸಲಿ ಎಂದು ಕನ್ನಡ ವಿವಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿದರು.

ನಗರದ ಒಳಾಂಗಣ ಕ್ರೀಡಾಂಗಣಲ್ಲಿ ಶನಿವಾರ ಸಂಜೆ ಜರುಗಿದ ಎಸ್‌ಎಫ್‌ಎಕ್ಸ್ ಚಾಪ್ ಹಾಗೂ ವಿವೇಕಶ್ರೇಯಾಲಾಪ ಎಂಬ ಆಡಿಯೋ ನಿರ್ಮಾಣ ಸಂಸ್ಥೆ ಹಾಗೂ ಸಂಗೀತ ಶಾಲೆ ಉದ್ಘಾಟನಾ ಸಮಾರಂಭದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕಥೆ, ಕಾದಂಬರಿ ಆಧಾರಿತ ಚಿತ್ರಗಳು ಚಿತ್ರೀಕರಣಗೊಂಡ ಬಳಿಕ ಶಬ್ಧ ಸಂಯೋಜನೆಗೆ ದೂರದ ನಗರಗಳಿಗೆ ತೆರಳುವುದನ್ನು ತಪ್ಪಿಸಲಿದೆ. ಚಿತ್ರಗಳಲ್ಲಿನ ಪಾತ್ರ, ಗಾಳಿ, ನೀರು, ಪಕ್ಷಿ, ವಾಹನ ಸೇರಿದಂತೆ ಹಲವು ವಿವಿಧ ಬಗೆಯ ದೃಶ್ಯಗಳಿಗೆ ತಕ್ಕಂತೆ ಮ್ಯೂಸಿಕ್ ನೀಡುವುದ ಒಂದು ಕಲೆಯಾಗಿದೆ. ಹೊಸಪೇಟೆಯಲ್ಲಿಯೇ ದೊಡ್ಡ ಸಿನಿಮಾ ಮತ್ತು ಕಿರುಚಿತ್ರಗಳ ಶೂಟಿಂಗ್ ನಂತರ ಮ್ಯೂಸಿಕ್ ನೀಡುವ ಅತ್ಯಧುನಿಕ ತಂತ್ರಜ್ಞಾನದೊಂದಿಗೆ ಸ್ಟುಡಿಯೋ ಮತ್ತು ಸಂಗೀತ ಶಾಲೆ ಆರಂಭಿಸಿರುವುದು ಶ್ಲಾಘನೀಯ ಕಾರ್ಯ. ಇದು ಅನೇಕ ಕಲಾವಿದರಲ್ಲಿ ಹೊಸ ಚೈತನ್ಯ ತುಂಬಲಿದೆ. ಉತ್ತರ ಕರ್ನಾಟಕದ ಕಲಾವಿದರಿಗೂ ಸಹಕಾರಿಯಾಗಲಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯವು ಸಂಪೂರ್ಣ ಬೆಂಬಲ ನೀಡಲಿದೆ. ಸಂಗೀತ ದೈನಂದಿನ ಜೀವನಕ್ಕೆ ಎಷ್ಟು ಅವಶ್ಯಕವಾಗಿದೆ ಎಂಬುದನ್ನು ಜನರು ಅರಿತು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಕರೆ ನೀಡಿದರು

ಬರಹಗಾರ್ತಿ, ನಟಿ ಹಾಗೂ ರಂಗಭೂಮಿ ಕಲಾವಿದರಾದ ಜಯ ಲಕ್ಷ್ಮೀ ಪಾಟೀಲ್ ಅವರು ಮಾತನಾಡಿ, ಇಂದಿನ ಪೀಳಿಗೆಯ ಮಕ್ಕಳಿಗೆ ಸಂಗೀತವೆಂಬುದು ಅವಶ್ಯಕ, ಈ ಸ್ಟುಡಿಯೋದಿಂದ ಕಲಾವಿದರಿಗೆ ಬಹಳಷ್ಟು ಅನುಕೂಲವಾಗಲಿದೆ ಹಾಗೂ ಹೊಸ ಪ್ರತಿಭೆಗಳು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟರು. ಸೌಂಡ್ ಎಫೆಕ್ಟ್ಸ್ ಹಾಗೂ ಸೌಂಡ್ ಡಿಸೈನ್‌ನ ಮಹತ್ವವನ್ನು ಜನರಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಕೃಷ್ಣ ಸುಜನ್ ಫಿಲಂ ಮೇಕರ್ ಹಾಗೂ ಎಡಿಟರ್, ಲಾಟಿ ಫಿನ್ಲೇರ್ ಅಂತರಾಷ್ಟ್ರೀಯ ಬರಹಗಾರ್ತಿ, ಮುರಳಿಧರ್ ಗಿಡಿಜಾಲ ಚಿತ್ರ ನಿರ್ದೇಶಕರು, ಸಂಭಾಷಣಕಾರರು ಮತ್ತು ನಗರದ ಸಂಗೀತಾಸಕ್ತರು, ಎಸ್‌ಎಫ್‌ಎಕ್ಸ್ ಸಂಸ್ಥಾಪಕ ವಿಹಾನ್ ಅಭ್ಯುದಯ, ಅಚಲ, ಸಮಾಜದ ಹಿರಿಯ ಮುಖಂಡ ಶರಣಸ್ವಾಮಿ, ಕಲಾವಿದರಾದ ಅಭಿನಂದನ್‌ರೆಡ್ಡಿ, ಭರತ್ ಉಪಸ್ಥಿತರಿದ್ದರು. ಕಲಾತಂಡ ಸಂಗೀತ ಸುಧೆ ಪ್ರಸ್ತುತಪಡಿಸಿತು.

ಬೆಳ್ಳಿ ಪರದೆಯ ಮೇಲೆ ನೋಡುವ ಸಿನಿಮಾಗಳು, ಟಿ.ವಿ., ಮೊಬೈಲ್‌ನಲ್ಲೂ ನೋಡುವ ಕಿರುಚಿತ್ರಗಳಲ್ಲಿ ಪಾತ್ರಗಳ ಅಭಿಯನಕ್ಕೆ ತಕ್ಕಂತೆ ಸೃಜಿಸುವ ಸಂಗೀತ ಶಬ್ಧಗಳು ನೋಡುಗರನ್ನು ಬೆರಗುಗೊಳಿಸುತ್ತವೆ. ಸೌಂಡ್ಸ್ ಎಫೆಕ್ಟ್ ಇಲ್ಲದ ಚಿತ್ರಗಳನ್ನೊ ಊಹಿಸಿಕೊಳ್ಳುವುದು ಅಸಾಧ್ಯ ಎನ್ನುವಷ್ಟರ ಮಟ್ಟಿಗೆ ಮ್ಯೂಸಿಕ್ ಪರಿಣಾಕಾರಿಯಾಗಿ ಜನರ ಮೇಲೆ ಪ್ರಭಾವ ಬೀರಿದೆ, ಸಂಗೀತ ನಮ್ಮ ಸಂಸ್ಕೃತಿಯ ಸಂಕೇತವೂ ಆಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ನಗರದ 100 ಬೆಡ್ ಆಸ್ಪತ್ರೆ ರಸ್ತೆಯಲ್ಲಿ ಶ್ರೀ ಕೊಟ್ಟೂರೇಶ್ವರ ಕಾಂಪ್ಲೆಕ್ಸ್ ನ 2ನೇ ಮಹಡಿಯಲ್ಲಿ ಎಸ್‌ಎಫ್‌ಎಕ್ಸ್ ಚಾಪ್ ಹಾಗೂ ವಿವೇಕಶ್ರೇಯಾಲಾಪ ಎಂಬ ಆಡಿಯೋ ನಿರ್ಮಾಣ ಸಂಸ್ಥೆ ಹಾಗೂ ಸಂಗೀತ ಶಾಲೆಯನ್ನು ಉದ್ಘಾಟಿಸಿ ಮಾತನಾಡಿದರು. ಸ್ವರಾರ್ಥ ಬೈ ಎಸ್ ಎಫ್ ಎಕ್ಸ್ ಚಾಪ್ ಎಂಬ ಮ್ಯೂಸಿಕಲ್ ಫ್ಯೂಶನ್ ಬ್ಯಾಂಡ್ ತಂಡದ ಮುಂದಿನ ಯೋಜನೆಗಳಿಗೆ ಶುಭವಾಗಲಿ ಎಂದು ಹಾರೈಸಿದರು.






# ಚುನಾವಣಾ ಮಾರ್ಗಸೂಚಿ ಅನುಸರಿಸಿ

## ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯಲ್ಲಿ ಡಿಸಿ ದಿವಾಕರ ಖಡಕ್ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಸೋಮವಾರ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದರು.

ಸಭೆಯಲ್ಲಿ ಮಾತನಾಡಿದ ಅವರು, ಏಪ್ರೀಲ್ 12ರಂದು ರಂದು ಅಧಿಸೂಚನೆ ಹೊರಡಿಸಲಾಗುವುದು. ಮೇ 7ರಂದು ಮತದಾನ ಮತ್ತು ಜೂನ್ 4ರಂದು ಮತ ಎಣಿಕೆ ನಡೆಯಲಿದೆ. ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರವಾಸಿ ಮಂದಿರಗಳಲ್ಲಿ ರಾಜಕೀಯ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ. ಎಲ್ಲಾ ನಾಮ ನಿರ್ದೇಶನಗೊಂಡಿರುವಂತಹ ನಿಗಮ ಮಂಡಳಿಗಳನ್ನು ಹಾಗೂ ಸಮಿತಿಗಳನ್ನು ಸಂಪೂರ್ಣ ಚುನಾವಣೆ ಪ್ರಕ್ರಿಯೆ ಮುಕ್ತಾಯದವರೆಗೆ ಅಮಾನತ್ತಿನಲ್ಲಿಡಲಾಗಿದೆ ಎಂದು ತಿಳಿಸಿದ ಅವರು, ರಾಜಕೀಯ ಪಕ್ಷಗಳು ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಅನುಸರಿಸಬೇಕು ಎಂದು ತಿಳಿಸಿದರು.

ಯಾವುದೇ ಉದ್ದೇಶಿತ ಸಭೆಗೆ ಸಂಬಂಧಿಸಿದಂತೆ ಧ್ವನಿವರ್ಧಕಗಳು ಅಥವಾ ಇತರೆ ಯಾವುದೇ ಸೌಲಭ್ಯವನ್ನು ಬಳಸಲು ಅನುಮತಿ ಅಥವಾ ಪರವಾನಿಗಿ ಪಡೆಯಬೇಕಾದರೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮುಂಚಿತವಾಗಿ ಅರ್ಜಿ ಸಲ್ಲಿಸಬೇಕು



ಮತ್ತು ಅಂತಹ ಅನುಮತಿ ಮತ್ತು ಪರವಾನಿಗೆ ಪಡೆಯಬೇಕು. ಮೆರವಣಿಗೆಯನ್ನು ಆಯೋಜಿಸುವ ಪಕ್ಷ ಅಥವಾ ಅಭ್ಯರ್ಥಿಯು ಮೆರವಣಿಗೆ ಪ್ರಾರಂಭವಾಗುವ ಸಮಯ ಮತ್ತು ಸ್ಥಳ, ಅನುಸರಿಸಬೇಕಾದ ಮಾರ್ಗ ಮತ್ತು ಮೆರವಣಿಗೆ ಕೊನೆಗೊಳ್ಳುವ ಸಮಯ ಮತ್ತು ಸ್ಥಳವನ್ನು ಮುಂಚಿತವಾಗಿ ನಿರ್ಧರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕು. ಒಮ್ಮೆ ಅನುಮತಿ ಪಡೆದ ಮೇಲೆ ಯಾವುದೇ ಕಾರಣಕ್ಕು ಮಾರ್ಗವನ್ನಾಗಲಿ ಅಥವಾ ಕಾರ್ಯಕ್ರಮವನ್ನಾಗಲಿ ಬದಲಾಯಿಸುವಂತಿಲ್ಲ. ಸ್ಥಳೀಯ ಪೊಲೀಸ್ ಮತ್ತು ಚುನಾವಣಾ ಸಿಬ್ಬಂದಿ ನೀಡುವ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎನ್ನುವ ನಿಯಮಗಳನ್ನು ಪಾಲನೆ ಮಾಡಬೇಕು ಎಂದು ತಿಳಿಸಿದರು.

- ಮತಗಟ್ಟೆ ಪ್ರವೇಶಕ್ಕೆ ಅನುಮತಿ ಹೊಂದಿದ ಏಜೆಂಟರುಗಳಿಗೆ ಮಾತ್ರ
- ನಿರ್ಬಂಧಿಸಿದ ಪ್ರದೇಶದೊಳಗೆ ಯಾವುದೇ ಚುನಾವಣಾ ಪ್ರಚಾರ ಮಾಡುವಂತಿಲ್ಲ
- ಉದ್ವಿಘ್ನತೆಯನ್ನು ಉಂಟು ಮಾಡುವ ಯಾವುದೇ ಚಟುವಟಿಕೆಯಲ್ಲಿ ತೊಡಗಬಾರದು.ಎಲ್ಲಾ ಸಹಕಾರ ನೀಡಬೇಕು.
- ಚುನಾವಣಾ ಭಾಷಣ ಅಥವಾ ಸುದ್ದಿಗೋಷ್ಠಿಯಲ್ಲಿ ಪರಸ್ಪರ ದ್ವೇಷವನ್ನು ಉಂಟು ಮಾಡುವ ಹೇಳಿಕೆಗಳ ಮೇಲೆ ನಿರ್ಬಂಧ ವಿಧಿಸಲಾಗಿದೆ.
- ಮತಗಳನ್ನು ಪಡೆಯಲು ಜಾತಿ ಅಥವಾ ಕೋಮು ಭಾವನೆಗಳ ಆಧಾರದ ಮೇಲೆ ಮನವಿ ಮಾಡಬಾರದು.
- ಮಸೀದಿಗಳು, ಚರ್ಚ್‌ಗಳು, ದೇವಾಲಯಗಳು ಅಥವಾ ಇತರೆ ಪೂಜಾ ಸ್ಥಳಗಳನ್ನು ಚುನಾವಣಾ ಪ್ರಚಾರಕ್ಕಾಗಿ ವೇದಿಕೆಯಾಗಿ ಬಳಸಬಾರದು

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನುರಾಧ ಜಿ., ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಡಿ.ಶಿವಶಂಕರ, ಕೆ.ಅನಂತ ಪ್ರದ್ಮನಾಭ, ಚಂದ್ರಕಾಂತ ಕೆ., ನಿಂಬಗಲ್ ರಾಮಕೃಷ್ಣ, ವಿ.ನಾಗರಾಜ, ಎಂ.ಡಿ.ಜಾವೀದ್ ಹಾಗೂ ಇತರರು ಇದ್ದರು.

# ಮಾ.25 ರಿಂದ ಏ.06 ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ

## ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ನಿರ್ಬಂಧ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಾದ್ಯಂತ ಮಾ.25 ರಿಂದ ಏ.06 ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ನಡೆಯಲಿದ್ದು, ಶಾಂತಿ–ಸುವ್ಯವಸ್ಥೆ ಹಿನ್ನಲೆಯಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ದಂಡ ಪ್ರಕ್ರಿಯಾ ಸಂಹಿತೆ 1973ರ ಕಲಂ 144 ಅನ್ವಯ ನಿರ್ಭಂದಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತಲಿನ ಜೆರಾಕ್ಸ್, ಕಂಪ್ಯೂಟರ್, ಸೈಬರ್ ಸೆಂಟರ ‌ಗಳುಕಾರ್ಯನಿರ್ವಹಿಸುವಂತಿಲ್ಲ ಮತ್ತು ಅನಧೀಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶ ನಿಷೇಧಿಸಿದೆ.

ಈ ಆದೇಶವು ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೇಲ್ವಿಚಾರಣೆ ಕಾರ್ಯ ನಿರ್ವಹಿಸುವ ಸಿಬ್ಬಂದಿಯವರಿಗೆ ಅನ್ವಯಿಸುವುದಿಲ್ಲ ಎಂದು ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

# ಲೋಕಸಭಾ ಚುನಾವಣೆ ಹಿನ್ನೆಲೆ: ಶಸ್ತ್ರಾಸ್ತ್ರ, ಮದ್ದುಗುಂಡುವಿನೊಂದಿಗೆ ತಿರುಗಾಟ ನಿಷೇಧ

**ಹಂಪಿ ಟೈಮ್ಸ್ ಹೊಸಪೇಟೆ**

2024ರ ಮಾರ್ಚ 16ರಿಂದ ಕೇಂದ್ರ ಚುನಾವಣಾ ಆಯೋಗವು ಹೊರಿಡಿಸಿದ ನೀತಿ ಸಂಹಿತೆಯು ಮುಕ್ತಾಯವಾಗುವವರೆಗೆ ವಿಜಯನಗರ ಜಿಲ್ಲೆಯಲ್ಲಿ ಪರವಾನಿಗೆ ಹೊಂದಿರುವ ಎಲ್ಲರೂ ತಮ್ಮ ಶಸ್ತ್ರ ಮತ್ತು ಮದ್ದುಗುಂಡುಗಳನ್ನು ಯಾವುದೇ ಕಾರಣಕ್ಕು ಇಟ್ಟುಕೊಂಡು ತಿರುಗಾಡುವುದನ್ನು ನಿಷೇಧಿಸಿದೆ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

ಪರವಾನಿಗೆದಾರರು ತಕ್ಷಣದಿಂದ ತಾವು ಹೊಂದಿದ ಶಸ್ತ್ರಾಸ್ತ್ರವನ್ನು ಹತ್ತಿರದ ಪೊಲೀಸ್ ಠಾಣೆಯಲ್ಲಿ ಠೇವಣಿ ಮಾಡಬೇಕು. ಶಸ್ತ್ರಾಸ್ತ್ರ ತಯಾರಕರು ಮತ್ತು ಮಾರಾಟಗಾರರು ಮಾರ್ಚ 16ರಿಂದ ಕೇಂದ್ರ ಚುನಾವಣೆ ಆಯೋಗವು ಹೊರಡಿಸುವ ನೀತಿ ಸಂಹಿತೆ ಮುಕ್ತಾಯವಾಗುವ ಅವಧಿವರೆಗೆ ನಮೂನೆ 111 ಹಾಗೂ ನಮೂನೆ 4ರಲ್ಲಿ ಹೊಂದಿದ ಪರವಾನಿಗೆದಾರರಿಗೆ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಮಾರಾಟ ಮಾಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಿದೆ. ಹಾಗೂ ಪ್ರತಿದಿನ ತಮ್ಮ ಮಾರಾಟ ದಾಸ್ತಾನು ವ್ಯವಹಾರಗಳ ವಿವರಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು. ಪರವಾನಿಗೆ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಕೇಂದ್ರ ಲೋಕಸೇವಾ ಚುನಾವಣೆ–2024ರ ನೀತಿ ಸಂಹಿತೆ ಮುಕ್ತಾಯಗೊಂಡ ನಂತರ ಬಿಡುಗಡೆ ಮಾಡಲಾಗುವುದು ಎಂದು ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿದೆ.

ಹಂಪಿ ಟೈಮ್ಸ್: ಸುದ್ದಿ ಜಾಹೀರಾತಿಗಾಗಿ ಸಂಪರ್ಕಿಸಿ
ಮೊ: 9448633038

# ಕ್ಷಯಮುಕ್ತ ಜಿಲ್ಲೆಗೆ ಎಲ್ಲರೂ ಶ್ರಮಿಸೋಣ

## ಡಿಹೆಚ್‌ಓ ಡಾ.ವೈ.ರಮೇಶ್‌ಬಾಬು ಹೇಳಿಕೆ। ನಾವೆಲ್ಲರೂ ಒಗ್ಗಟ್ಟಾಗಿದ್ದರೆ ಕ್ಷಯರೋಗವು ಸಂಪೂರ್ಣವಾಗಿ ಮರೆಯಾಗುವುದು

**ಹಂಪಿ ಟೈಮ್ಸ್ ಬಳ್ಳಾರಿ**

ಶತಮಾನಗಳಿಂದಲೂ ಸಮುದಾಯದಲ್ಲಿ ಇರುವ ಕ್ಷಯರೋಗವನ್ನು ನಿರ್ಮೂಲನೆ ಮಾಡಲು ವಿವಿಧ ಇಲಾಖೆಗಳ ಸಹಕಾರದೊಂದಿಗೆ ಪ್ರತಿಯೊಬ್ಬ ಸಾರ್ವಜನಿಕರೂ ಕೈಜೋಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ. ರಮೇಶ್ ಬಾಬು ಅವರು ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ (ವಿಮ್ಸ್), ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಸ್ಪತ್ರೆ, ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಘಟಕ ಇವರ ಸಹಯೋಗದಲ್ಲಿ "ನಾವೆಲ್ಲರೂ ಒಗ್ಗಟ್ಟಾಗಿದ್ದರೆ ಕ್ಷಯರೋಗವು ಸಂಪೂರ್ಣವಾಗಿ ಮರೆಯಾಗುವುದು" ಎಂಬ ಘೋಷವಾಕ್ಯದಡಿ ವಿಮ್ಸ್‌ನಿಂದ ಜಿಲ್ಲಾ ಆಸ್ಪತ್ರೆವರೆಗೆ ಭಾನುವಾರ ಹಮ್ಮಿಕೊಂಡಿದ್ದ ಕ್ಷಯರೋಗ ಜಾಗೃತಿಗಾಗಿ 5 ಕಿ.ಮೀ ಮ್ಯಾರಾಥಾನ್ ಓಟದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮೈಕ್ರೋ ಬ್ಯಾಕ್ಟೀರಿಯಂ ಟ್ಯೂಬರ್‌ಕ್ಯುಲೋಸಿಸ್ ಎಂಬ ರೋಗಾಣುವಿನಿಂದ ಹರಡಲಿದ್ದು, ಯಾರಿಗಾದರೂ ಎರಡು ವಾರಗಳಿಗಿಂತ ಹೆಚ್ಚು ದಿನದ ಕೆಮ್ಮು, ಉಸಿರಾಟದಲ್ಲಿ ತೊಂದರೆ, ಸಂಜೆ ವೇಳೆ ಜ್ವರ, ರಾತ್ರಿ ವೇಳೆ ಮೈ ಬೆವರುವುದು, ಕಫದಲ್ಲಿ ರಕ್ತ ಬೀಳುವುದು, ಎದೆ ನೋವು, ಹಸಿವಾಗದಿರುವುದು, ತೂಕ ಇಳಿಕೆ, ರೋಗದ ಪ್ರಮುಖ ಲಕ್ಷಣಗಳು ತಮ್ಮ ಗಮನಕ್ಕೆ ಬಂದಲ್ಲಿ




ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಿ, ಕಫ ಪರೀಕ್ಷೆ ಮಾಡಿಸುವ ಮೂಲಕ ರೋಗವನ್ನು ಬೇಗನೆ ಪತ್ತೆ ಹಚ್ಚಲು ಸಹಕರಿಸಬೇಕು ಎಂದರು.

ಒಮ್ಮೆ ಕ್ಷಯರೋಗ ಪತ್ತೆಯಾದರೆ ಅವರ ಚಿಕಿತ್ಸಾ ಅವಧಿಯು ಮುಗಿಯುವವರೆಗೆ ಮೇಲ್ವಿಚಾರಣೆ, ರೋಗಿಗೆ ಬೆಂಬಲ ಹಾಗೂ ದಾನಿಗಳಿಂದ ಪೌಷ್ಟಿಕ ಆಹಾರ ಒದಗಿಸಲಾಗುವುದು. ಅದರಲ್ಲೂ ಮಕ್ಕಳಿಗೆ ಕ್ಷಯರೋಗ ಇದ್ದಲ್ಲಿ ಪಾಲಕರ, ಸುತ್ತಲಿನ ಮನೆಗಳ ಮತ್ತು ಮಗುವಿಗೆ ಒಡನಾಟವಿರುವವರ ಪರೀಕ್ಷೆ ಮಾಡಲು ಕ್ರಮವಹಿಸಬೇಕು. ಈ ದಿಶೆಯಲ್ಲಿ ವೈದ್ಯ ವಿದ್ಯಾರ್ಥಿಗಳು ತಾವು ಮುಂದೆ ಬರಬೇಕು ಎಂದು ಸಲಹೆ ಮಾಡಿದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರು ಮಾತನಾಡಿ, ರೋಗ ಖಚಿತ ಪಟ್ಟವರನ್ನು ಚಿಕಿತ್ಸೆ ಮುಗಿಯುವವರೆಗೂ ಮೇಲ್ವಿಚಾರಣೆ ಕೈಗೊಳ್ಳಲಾಗುವುದು. ಚಿಕಿತ್ಸೆ ನಿರ್ಲಕ್ಷಿಸಿದಲ್ಲಿ ರೋಗಿಯು ಬಹುಔಷಧಿ ರೋಗ ನಿರೋಧಕ ಕ್ಷಯರೋಗಿಯಾಗಿ ಎರಡು ವರ್ಷಗಳ ಕಾಲ ಚಿಕಿತ್ಸೆ ಪಡೆಯಬೇಕಾಗುತ್ತದೆ ಎಂದು ಮನನ ಮಾಡಿದರು.

ವೈದ್ಯ ವೃತ್ತಿ ಮಾಡುವವರು ಸಾಂಕ್ರಾಮಿಕ ರೋಗಗಳ ಸಂದರ್ಭದಲ್ಲಿ ಅತ್ಯಂತ ಅಪಾಯಕಾರಿ ಸನ್ನಿವೇಶಕ್ಕೆ ಒಳಗಾಗುತ್ತಾರೆ. ಈ ಹಿನ್ನಲೆ ಮುಂಜಾಗ್ರತೆ ವಹಿಸಿ ಯಾರಾದರೂ ಚಿಕಿತ್ಸೆ ಪಡೆಯಲು ನಿರಾಕರಿಸಿದರೆ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಚಿಕಿತ್ಸೆ ಪೂರ್ಣಗೊಳಿಸಬೇಕು. ಮುಖ್ಯವಾಗಿ ಕ್ಷಯರೋಗವನ್ನು ಸಾಮಾನ್ಯ ಖಾಯಿಲೆ ಎಂಬ ರೀತಿಯಲ್ಲಿ ಕಾಣುವ ಮೂಲಕ ಕಳಂಕ– ತಾರತಮ್ಯವನ್ನು ತೊಲಗಿಸುವ ಪ್ರಯತ್ನವನ್ನು ಮಾಡಬೇಕು ಎಂದು ವಿನಂತಿಸಿದರು.

ಕ್ಷಯರೋಗ ನಿರ್ಮೂಲನೆಗೆ ಹಮ್ಮಿಕೊಂಡಿದ್ದ 5 ಕಿ.ಮೀ. ಮ್ಯಾರಾಥಾನ್ ಓಟಕ್ಕೆ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಮೈಕ್ರೋ ಬಯೋಲಜಿ ವಿಭಾಗದ ಮುಖ್ಯಸ್ಥರಾದ ಡಾ.ಕೃಷ್ಣ ಅವರು ವಿಮ್ಸ್ ಆವರಣದಲ್ಲಿ ಚಾಲನೆ ನೀಡಿದರು.

ಓಟವು ವಿಮ್ಸ್‌ನಿಂದ ಆರಂಭವಾಗಿ ಸುಧಾ ವೃತ್ತದ ಮೂಲಕ ಹೆಚ್.ಆರ್.ಗವಿಯಪ್ಪ ವೃತ್ತದ ಮಾರ್ಗವಾಗಿ ಹಳೇ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಿಂದ ಗಡಿಗಿ ಚೆನ್ನಪ್ಪ ವೃತ್ತದ ಮಾರ್ಗವಾಗಿ ಬಂದು ಜಿಲ್ಲಾ ಆಸ್ಪತ್ರೆಯ ಆವರಣಕ್ಕೆ ಆಗಮಿಸಿ ಮುಕ್ತಾಯಗೊಂಡಿತು.

*ಮ್ಯಾರಾಥಾನ್ ಓಟದಲ್ಲಿ ವಿಜೇತರ ಪಟ್ಟಿ:*

ಮಹಿಳಾ ವಿಭಾಗದಲ್ಲಿ ಡಾ.ವಂದನಾ, ಡಾ.ನಿಸರ್ಗ, ಡಾ.ರಂಜೀತಾ ಪಾಟೀಲ್.

ಪುರುಷರು ವಿಭಾಗದಲ್ಲಿ ಡಾ.ಜೈಕುಮಾರ್.ಟಿ, ಡಾ.ಅಖೀಲ್, ಡಾ.ಮಲ್ಲನಗೌಡ.

ಈ ಸಂದರ್ಭದಲ್ಲಿ ವಿಮ್ಸ್ ತಜ್ಞ ವೈದ್ಯರಾದ ಡಾ. ಮಲ್ಲಿಕಾರ್ಜುನ, ಡಾ.ರಘುವೀರ, ಡಾ.ಅನೀಲಕುಮಾರ ಜೋಸೆಫ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ವೈದ್ಯ ವಿದ್ಯಾರ್ಥಿ ಸಂಘದ ಡಾ.ಲೋಕೇಶ್, ಡಾ.ಗೌರಿ, ಡಾ.ಪ್ರಸನ್ನ, ಡಾ.ಸಂತೋಷ ಹಾವೇರಿ, ಕ್ಷಯರೋಗ ಕಾರ್ಯಕ್ರಮದ ವಿಭಾಗದ ಪಂಪಾಪತಿ, ಓಬಳರೆಡ್ಡಿ, ಬಸವರಾಜ ರಾಜಗುರು, ಪ್ರದೀಪ್, ಚಂದ್ರಶೇಖರ, ಅಂದಾನಪ್ಪ ಅಂಡಿಗೇರಿ, ರಾಮಾಂಜನೇಯಲು, ವೀರೇಶ್ ಸೇರಿದಂತೆ ನೂರಾರು ವೈದ್ಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA